ಓಂ

ಭಗವದ್ವಿಷಯಗ್ರಂಥಮಾಲಾ
ಮೂರು

ಕೇನೋಪನಿಷತ್

(ಪ್ರತಿಪದಾರ್ಥ ತಾತ್ಪರ್ಯಗಳೊಡನೆ)

ಗ್ರಂಥಕರ್ತರು :

ಶ್ರೀ॥ ಉ॥ ವೇ॥ ಪರಮಹಂಸೇತ್ಯಾದಿ
ಶ್ರೀ॥ ಯದುಗಿರಿ ಯತಿರಾಜ ಸಂಪತ್ಕುಮಾರ
ರಾಮಾನುಜಜೀಯರ್ ಸ್ವಾಮಿಗಳು

ಪ್ರಕಾಶಕರು :

ಸಂಸ್ಕೃತಿ ಪ್ರಚಾರ ಸಭಾ,
ಶ್ರೀ ಯತಿರಾಜಮಠ, ಮೇಲ್ಕೋಟೆ.

೧೯೫೮

ಬೆಲೆ ಆರು ಆಣೆಗಳು.

ಉಪೋದ್ಘಾತ

ಇದು ಪ್ರಾಚೀನರಿಂದ ಪರಿಗಣಿತವಾದ ಹತ್ತು ಉಪನಿಷತ್ತುಗಳಲ್ಲಿ ಒಂದು. ಇದು ಸಾಮವೇದದ ತಲವಕಾರ ಬ್ರಾಹ್ಮಣಕ್ಕೆ ಸೇರಿದ್ದು. ತಲವಕಾರ ಬ್ರಾಹ್ಮಣಕ್ಕೆ ಜೈಮಿನೀಯ ಬ್ರಾಹ್ಮಣವೆಂದೂ ಹೆಸರು. ಕೆಲವು ಪಾಶ್ಚಾತ್ಯ ವಿದ್ವಾಂಸರು ಇದು ಜೈಮಿನೀಯ ಬ್ರಾಹ್ಮಣದ ನಾಲ್ಕನೆಯ ಅಧ್ಯಾಯದ ಹತ್ತನೆಯ ಅನುವಾಕವಾಗಿರುವುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ವೇದದ ಉತ್ತರಭಾಗವಾದ ಈ ಉಪನಿಷತ್ತಿನ ಮೊದಲನೆಯ ಮಂತ್ರವು "ಕೇನ" ಎಂಬ ಪದದಿಂದ ಆರಂಭವಾಗಿರುವುದರಿಂದ "ಕೇನೋಪನಿಷತ್" ಎಂದು ಇದಕ್ಕೆ ಹೆಸರು ಬಂದಿದೆ. ಕೇವಲ ಬಾಯಿಪಾಠದಿಂದ ಈ ಉಪನಿಷತ್ತುಗಳು ವೇದದಂತೆ ನಮಗೆ ಅನೂಚಾನವಾಗಿ ಬಂದಿರುವುದರಿಂದ ಇವುಗಳನ್ನು ಸುಲಭವಾಗಿ ಗುರ್ತಿಸಲು ಈ ಉಪನಿಷತ್ತುಗಳ ಮೊದಲನೆಯ ಪದದಿಂದಲೇ ಇವುಗಳನ್ನು ಕರೆದಿರಬಹುದು. ಈ ಉಪನಿಷತ್ತು ಈಶೋಪನಿಷತ್ತಾದಮೇಲೆ ಸಾಂಪ್ರದಾಯಿಕವಾಗಿ ಬಂದರೂ ಅದಕ್ಕಿಂತ ಇದು ಪ್ರಾಚೀನವೆಂದು ಕೆಲವರ ಅಭಿಪ್ರಾಯ.

ಉಪನಿಷತ್ತುಗಳು ಜೀವಾತ್ಮ ಪರಮಾತ್ಮ ಸ್ವರೂಪಗಳನ್ನು ವಿಶದಪಡಿಸಿ, ಜೀವಾತ್ಮನಿಗಿಂತ ಶ್ರೇಷ್ಠನಾದ ಪರಮಾತ್ಮನನ್ನು ಈ ಜೀವನು ಹೊಂದುವುದಕ್ಕೆ ಉಪಾಯವನ್ನೂ, ಆ ಉಪಾಯದಿಂದ ಲಭಿಸುವ ಪರಮಾತ್ಮನ ಅನುಭವವೆಂಬ ನಿರತಿಶಯ ಸುಖರೂಪವಾದ ಪ್ರಯೋಜನವನ್ನೂ ತಿಳಿಸುವವು ಎಂದು ಈಶೋಪನಿಷತ್ತಿನ ಉಪೋದ್ಘಾತದಲ್ಲಿ ತಿಳಿಸಲ್ಪಟ್ಟಿರುತ್ತೆ. ಈ ಉಪನಿಷತ್ತಿನಲ್ಲಿ, ಇಂದ್ರಿಯ ಪ್ರಾಣ ಮೊದಲಾದುವನ್ನು ಪ್ರೇರಿಸತಕ್ಕ ಜೀವಾತ್ಮನಿಗೂ, ಆ ಪ್ರೇರಣ ಶಕ್ತಿಯನ್ನು ಕೊಡತಕ್ಕವನು ಪರಮಾತ್ಮನೆಂದೂ, ಆತನು ಜೀವಾತ್ಮನಿಗಿಂತ ಅತ್ಯಂತ ವಿಲಕ್ಷಣನೆಂದೂ, ಆತನೇ ಇಂದ್ರಾದಿ ದೇವತೆಗಳಿಗೂ ಶಕ್ತಿ ಕೊಡತಕ್ಕವನೆಂದೂ, ಆತನ ಶಕ್ತಿಯಿಂದಲೇ ಇವೆಲ್ಲವೂ ಕೆಲಸ ಮಾಡಲು ಸಾಮರ್ಥ್ಯವುಳ್ಳವುಗಳಾಗುವವೆಂದೂ, ಆತನ

ಸ್ವರೂಪವನ್ನು ಅಲ್ಪ ಸ್ವಲ್ಪ ತಿಳಿಯಬಹುದಲ್ಲದೆ ಪೂರ್ಣವಾಗಿ ತಿಳಿಯುವುದು ಯಾರಿಗೂ ಅಸಾಧ್ಯವೆಂದೂ, ಅಂತಹ ಪರಮಾತ್ಮನ ಸ್ವರೂಪವು ಅಳತೆಯಿಲ್ಲದುದೆಂದು ಅರಿತು ಆತನ ಧ್ಯಾನದಲ್ಲಿ ನಿರತನಾಗಿ ಜೀವಾತ್ಮನು ಅಮೃತತ್ವವನ್ನು ಹೊಂದುವನೆಂಬುದನ್ನು ಸ್ಪಷ್ಟಪಡಿಸಿದೆ.

ಈ ಉಪನಿಷತ್ತಿನಲ್ಲಿ ನಾಲ್ಕು ಖಂಡಗಳಿವೆ. ಮೊದಲನೆಯ ಖಂಡದಲ್ಲಿ ಪರಬ್ರಹ್ಮನು ಕಣ್ಣಿಗೆ ಕಣ್ಣು, ಕಿವಿಗೆ ಕಿವಿ, ಪ್ರಾಣಕ್ಕೆ ಪ್ರಾಣ, ಆತನೇ ಅವುಗಳಿಗೆ ಪ್ರೇರಕನು, ಅವುಗಳಿಗೆ ಗೋಚರನಲ್ಲ; ಆದರೆ ಮೊಲದ ಕೊಂಬಿನಂತೆ ತುಚ್ಛವಲ್ಲ; ಅಳತೆಯಿಲ್ಲದವನು ಎಂಬುದನ್ನು ನಿರೂಪಿಸಿರುತ್ತದೆ. ಎರಡನೆಯ ಖಂಡದಲ್ಲಿ ಪರಮಾತ್ಮನ ವಿಭವವ್ಯೂಹ ರೂಪಗಳನ್ನರಿತಮಾತ್ರಕ್ಕೆ ಆತನ ಪೂರ್ಣರೂಪ ತಿಳಿದಂತಾಗದು. ಆತನಲ್ಲಿರುವ ಸತ್ಯತ್ವ, ಜ್ಞಾನತ್ವ, ಅನಂತತ್ವವೆಂಬ ಅಸಾಧಾರಣ ಗುಣಗಳಿಂದ ಆತನು ಇತರ ಎಲ್ಲಾ ವಸ್ತುಗಳಿಗಿಂತ ವಿಲಕ್ಷಣನೆಂಬುದನ್ನು ವೇದ ಶಾಸ್ತ್ರಗಳ ಮೂಲಕ ತಿಳಿದು, ಅತನನ್ನು ನಿರಂತರ ಧ್ಯಾನಮಾಡಿದರೆ ಜೀವಾತ್ಮನು ಈ ಲೋಕವನ್ನು ಬಿಟ್ಟು ವೈಕುಂಠವನ್ನು ಸೇರಿ ಅಮೃತತ್ವವನ್ನು ಹೊಂದುವನೆಂಬುದನ್ನು ವಿಶದಪಡಿಸಿ, ಈ ಸಂಸಾರ ದುಃಖದಿಂದ ಪಾರಾಗಿ ಬ್ರಹ್ಮಪ್ರಾಪ್ತಿಯೆಂಬ ಮೋಕ್ಷವನ್ನು ಪಡೆಯಲು ಪ್ರತಿಯೊಬ್ಬರೂ ಬ್ರಹ್ಮವಿದ್ಯೆಯಲ್ಲಿ ಉತ್ಸಾಹ, ತ್ವರೆಯನ್ನು ತೋರಿಸಬೇಕೆಂದು ಹೇಳಿರುತ್ತದೆ. ಮೂರನೆಯ ಖಂಡದಲ್ಲಿ ಒಂದು ಸಣ್ಣ ಕಥೆಯ ಮೂಲಕ ಎಲ್ಲರಿಗೂ ಪರಮಾತ್ಮನ ಅನುಗ್ರಹದಿಂದಲೇ ಆಯಾ ಕೆಲಸ ಮಾಡತಕ್ಕ ಶಕ್ತಿಯುಂಟಾಗುವುದೆಂದೂ ತಮ್ಮ ತಮ್ಮ ಶಕ್ತಿಯಿಂದಲೇ ಎಲ್ಲಾ ಕೆಲಸವೂ ನಿರ್ವಾಹವಾಗುವುದೆಂಬುದು ದುರಭಿಮಾನದ ಫಲವೆಂದೂ ವ್ಯಕ್ತಪಡಿಸಿದೆ. ಕಡೆಯದಾದ ನಾಲ್ಕನೆಯ ಖಂಡದಲ್ಲಿ ಇಂದ್ರನು ಆಚಾರ್ಯಳಾದ ಮಹಾಲಕ್ಷ್ಮಿಯಿಂದ ಯಕ್ಷರೂಪದಿಂದ ಬಂದಿರುವವನು ಪರಬ್ರಹ್ಮನೆಂದೂ ಸರ್ವಶಕ್ತನಾದ ಅವನಿಂದಲೇ ರಾಕ್ಷಸರನ್ನು ಗೆದ್ದುದೆಂದೂ ಪರಬ್ರಹ್ಮರೂಪವನ್ನು ತಿಳಿದುಕೊಂಡನೆಂದು ಹೇಳಿದೆ. ಅಲ್ಲದೆ ಅಗ್ನಿ, ವಾಯುಗಳಿಗಿಂತ ಮೊದಲು ಆತನು ಬ್ರಹ್ಮಸ್ವರೂಪವನ್ನು ತಿಳಿದುಕೊಂಡುದರಿಂದ ಅವರಿಗಿಂತ ಅವನು ಮೇಲು. ಆ ಪರಬ್ರಹ್ಮನ ಸಾಕ್ಷಾತ್ಕಾರವು ಮಿಂಚಿ

ನಂತೆ ಅಥವಾ ರೆಪ್ಪೆ ಮುಚ್ಚಿ ತೆಗೆಯುವಂತೆ ಕ್ಷಣಮಾತ್ರವಿದ್ದು ಮರೆಯಾಗುವುದು. ಚಂಚಲವಾದ ಮನಸ್ಸು ಆ ಪರಬ್ರಹ್ಮನನ್ನು ವಿಚ್ಛೇದವಿಲ್ಲದೆ, ಸ್ಮರಿಸಲಾರದು. ಬ್ರಹ್ಮವು ಎಲ್ಲರಿಗೂ ಬೇಕಾದ ವಸ್ತು. ಆತನನ್ನು ಉಪಾಸನೆ ಮಾಡತಕ್ಕವರು ಎಲ್ಲರಿಗೂ ಬೇಕಾದವರು. ಆದ್ದರಿಂದ ಬ್ರಹ್ಮಜ್ಞಾನವನ್ನು ಧೃಡಪಡಿಸಿಕೊಳ್ಳಬೇಕು. ಇದು ವೇದವನ್ನು ಸಾಂಗವಾಗಿ ಕಲಿತು ತಪಸ್ಸು, ದಮ, ಯಜ್ಞಾದಿ ಕರ್ಮ ಇವುಗಳನ್ನು ಶಾಸ್ತ್ರರೀತಿಯಲ್ಲಿ ಅಭ್ಯಾಸ ಮಾಡುವುದರಿಂದ ಸಾಧ್ಯ. ಈ ರೀತಿ ಅಂಗದೊಡನೆ ಕೂಡಿದ ಬ್ರಹ್ಮವಿದ್ಯೆಯನ್ನು ಆಚರಿಸಿದವನು ಮೋಕ್ಷಪ್ರಾಪ್ತಿಗೆ ಅಡ್ಡಿಯಾದ ಪುಣ್ಯ ಪಾಪಗಳನ್ನು ಕಳೆದುಕೊಂಡು ವೈಕುಂಠವನ್ನು ಸೇರಿ ಪುನರ್ಜನ್ಮವಿಲ್ಲದೆ ಶಾಶ್ವತನಾಗಿರುವನು. ಈ ವಿಷಯಗಳೆಲ್ಲವನ್ನೂ ಈ ಖಂಡದಲ್ಲಿ ಹೇಳಲಾಗಿದೆ.

ಹೀಗೆ ಈ ಉಪನಿಷತ್ತು ಬ್ರಹ್ಮಸ್ವರೂಪ, ಅದನ್ನು ತಿಳಿಯುವ ಉಪಾಯ, ಆ ಬ್ರಹ್ಮಜ್ಞಾನದಿಂದಾಗುವ ಫಲ, ಇವುಗಳನ್ನು ಸ್ಪಷ್ಟಪಡಿಸಿರುತ್ತದೆ.

ಯತಿರಾಜಮಠ,
ತಿರುನಾರಾಯಣಪುರಂ,
೨೦—೯—೫೮

ಗ್ರಂಥಕರ್ತರು :

ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ

ರಾಮಾನುಜಜೀಯರ್ ಸ್ವಾಮಿಗಳು

|| ಶ್ರೀಃ ||

|| ಶ್ರೀಮತೇ ರಾಮಾನುಜಾಯನಮಃ ||

ಕೇನೋಪನಿಷತ್

ಮಂತ್ರ— ಕೇನೇಷಿತಂ ಪತತಿ ಪ್ರೇಷಿತಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ।
ಕೇನೇಷಿತಾಂ ವಾಚಮಿಮಾಂ ವದಂತಿ
ಚಕ್ಷುಃಶ್ರೋತ್ರಂ ಕ ಉ ದೇವೋ ಯುನಕ್ತಿ || ೧ ||

ಈ ಉಪನಿಷತ್ತು, ಜೀವಾತ್ಮನಿಗಿಂತ ಬೇರೆಯಾದ ಪರಮಾತ್ಮನಿರುವನು ಎಂಬ ಅಂಶವನ್ನು, ಪ್ರಶ್ನೆಮಾಡಿ ಅದಕ್ಕೆ ಉತ್ತರ ಹೇಳುವ ರೀತಿಯಲ್ಲಿ ವಿವರಿಸುವುದು. ಈ ವಿಷಯವು, ಈ ಉಪನಿಷತ್ತಿನ ಮೂರನೆಯ ಖಂಡದಲ್ಲಿ ಹೇಳಲ್ಪಟ್ಟಿರುವ ಕಥೆಯ ಸಂದರ್ಭದಿಂದ ವ್ಯಕ್ತಪಡುವುದು.

ಅರ್ಥ— ಮನಃ–ಮನಸ್ಸು, ಕೇನ–ಯಾವನಿಂದ, ಪ್ರೇರಿತಂ–ಪ್ರೇರಿಸಲ್ಪಟ್ಟು, ಇಷಿತಂ–ತನಗೆ ಇಷ್ಟವಾದ ವಸ್ತುವನ್ನು, ಪತತಿ–ಹೋಗಿ ಸೇರುತ್ತದೆ. ಪ್ರಥಮಃ ಪ್ರಾಣಃ–ಮುಖ್ಯ ಪ್ರಾಣವು, ಕೇನ ಯುಕ್ತಃ–ಯಾವನಿಂದ ಪ್ರೇರಿಸಲ್ಪಟ್ಟು, ಪ್ರೈತಿ–ತನ್ನ ಕಾರ್ಯಕ್ಕೆ ಹೋಗುತ್ತದೆ. ಕೇನ ಪ್ರೇರಿತಾಃ (ಜನಾಃ)–ಯಾವನಿಂದ ಪ್ರೇರಿಸಲ್ಪಟ್ಟ ಜನರು, ಇಷಿತಾಂ–ತಮಗೆ ಇಷ್ಟವಾದಂಥ, ಇಮಾಂ ವಾಚಂ–ಈ ಮಾತನ್ನು, ವದಂತಿ–ಹೇಳುತ್ತಾರೆ. ಚಕ್ಷುಶ್ರೋತ್ರಂ–ಕಣ್ಣು ಕಿವಿಗಳನ್ನು, ಕ ಉ ದೇವಃ ಯುನಕ್ತಿ–ಯಾವ ದೇವನು ಪ್ರೇರಿಸುವನು.

ತಾತ್ಪರ್ಯ— ಜೀವಾತ್ಮನು, ಶಾಸ್ತ್ರದ ಮೂಲಕ ಮಾಡಬೇಕಾದುದನ್ನೂ ಬಿಡಬೇಕಾದುದನ್ನೂ ತಿಳಿದುಕೊಂಡಿದ್ದರೂ, ಬಿಡತಕ್ಕವುಗಳನ್ನು ಬಿಡಲು

ಇಷ್ಟಪಟ್ಟರೂ, ಮನಸ್ಸು ಮೊದಲಾದ ಇಂದ್ರಿಯಗಳು, ತಾವೇ ಸ್ವತಂತ್ರಗಳಂ ಬಂತೆ ತಮಗೆ ಇಷ್ಟವಾದ ವಸ್ತುಗಳಲ್ಲಿಯೇ ಹೋಗಿ ಸೇರುತ್ತವೆ. ಅಚೇತನ ಗಳಾದ ಇವು ಈ ಜೀವಾತ್ಮನು ಇಷ್ಟಪಡದೆ ಇದ್ದರೂ ಬೇರೆ ವಿಷಯಗಳಲ್ಲಿ ಹೋಗಿ ಸೇರಬೇಕಾಗಿದ್ದರೆ ಈ ಜೀವಾತ್ಮನಿಗಿಂತ ಬೇರೆಯಾದ ಮತ್ತೊಬ್ಬ ಚೇತನನು ಪ್ರೇರಣೆ ಮಾಡಿರಬೇಕು. ಹೀಗೆ ಇವುಗಳನ್ನು ಪ್ರೇರಣೆ ಮಾಡತಕ್ಕ ಚೇತನನು ಯಾವನು? ಯಾವನ ಪ್ರೇರಣೆಯಿಂದ ಮನಸ್ಸು, ಇಷ್ಟವಿಷ ಯಗಳನ್ನು ಸೇರುತ್ತದೆ? ಪ್ರಾಣವಾಯುವು, ಕೆಲಸಮಾಡುತ್ತದೆ? ಜನರು ಮಾತನಾಡುತ್ತಾರೆ? ಕಣ್ಣು, ರೂಪವನ್ನು ನೋಡುತ್ತದೆ? ಕಿವಿಯು, ಶಬ್ದವನ್ನು ಕೇಳುತ್ತದೆ? ಎಂಬ ಪ್ರಶ್ನೆಯು ಈ ವಾಕ್ಯಗಳಿಂದ ತಿಳಿದುಬರು ತ್ತದೆ. ಇದರಿಂದ "ಸ ಕಾರಣಂ ಕರಣಾಧಿಪಾಧಿಪಃ" (ಇಂದ್ರಿಯಗಳಿಗೆ ಯಜಮಾನನಾದ, ಜೀವನಿಗೂ ಯಜಮಾನನಾದ ಪರಮಾತ್ಮನೇ ಎಲ್ಲಕ್ಕೂ ಕಾರಣನು) ಎಂದು ಮತ್ತೊಂದು ಕಡೆಯಲ್ಲಿ ಹೇಳಿರುವ ಶ್ರುತಿಯ ಅರ್ಥವು, ಇಲ್ಲಿ ತಿಳಿದುಬರುವುದು. ಇಲ್ಲಿ "ಕೇನ ...ವದನ್ತಿ" ಎಂಬ ವಾಕ್ಯ ದಿಂದ ಜೀವಾತ್ಮರನ್ನು ಹೇಳಿ, ಅವರೂ, ಪರಮಾತ್ಮನಿಂದ ಪ್ರೇರಿಸ ಲ್ಪಟ್ಟವರಾಗಿಯೇ ಮಾತನಾಡುತ್ತಾರೆ ಎಂಬುದಾಗಿ ಪರಮಾತ್ಮನಿಗೆ ಅಧೀನ ರಾಗಿರುವಿಕೆಯನ್ನು ತಿಳಿಸಿರುವುದರಿಂದ ಈ ವಾಕ್ಯವು ಜೀವಾತ್ಮನಿಗಿಂತ ಬೇರೆಯಾದ ಪರಮಾತ್ಮನ ವಿಷಯವಾದ ಪ್ರಶ್ನೆಯೆಂದು ಸ್ಪಷ್ಟವಾಗುವುದು.

ಮಂತ್ರ – ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್
ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ ೨ ॥

ಅರ್ಥ— ಶ್ರೋತ್ರಸ್ಯ–ತಿಳಿದುಕೊಳ್ಳತಕ್ಕ ಪುರುಷನಿಗೆ ಶಬ್ದವನ್ನು ತಿಳಿದುಕೊಳ್ಳುವುದರಲ್ಲಿ ಉಪಕಾರಮಾಡತಕ್ಕ ಕಿವಿಯಲ್ಲಿರುವ "ಶ್ರೋತ್ರ" ಎಂಬ ಇಂದ್ರಿಯಕ್ಕೆ, ಶ್ರೋತ್ರಂ–ಶಬ್ದವನ್ನು ತಿಳಿದುಕೊಳ್ಳುವ ಶಕ್ತಿಯನ್ನು ಕೊಡತಕ್ಕವನೂ, ಸ ಉ–ಆ ಪರಮಾತ್ಮನೇ, ಮನಸಃ–ಅಂತಃಕರಣಕ್ಕೆ, ಮನಃ–ತಿಳಿಸುವ ಶಕ್ತಿ ಕೊಡತಕ್ಕವನು, ಸ ಉ–ಆ ಪರಮಾತ್ಮನೇ, ವಾಚಃ

ಹ–ವಾಗಿಂದ್ರಿಯಕ್ಕೆ, ವಾಚಂ-ವಾಕ್ಕಿನ ವ್ಯಾಪಾರ ಮಾಡುವ ಶಕ್ತಿ ಕೊಡ ತಕ್ಕವನು, ಸ ಉ–ಆ ಪರಮಾತ್ಮನೇ, ಪ್ರಾಣಸ್ಯ–ಪ್ರಾಣವಾಯುವಿಗೆ, ಪ್ರಾಣಃ–ಎಲ್ಲಾ ಕಡೆಯಲ್ಲಿಯೂ ಸಂಚರಿಸುವ ಶಕ್ತಿ ಕೊಡತಕ್ಕವನೂ, ಸ ಉ–ಆ ಪರಮಾತ್ಮನೇ, ಚಕ್ಷುಷಃ–ನೇತ್ರೇಂದ್ರಿಯಕ್ಕೆ, ಚಕ್ಷುಃ–ರೂಪ ಮೊದಲಾದುವನ್ನು ನೋಡತಕ್ಕ ಸಾಮರ್ಥ್ಯ ಉಂಟುಮಾಡತಕ್ಕವನೂ, ಸ ಉ-ಆ ಪರಮಾತ್ಮನೇ, ಧೀರಾಃ–ಚೇತನ, ಅಚೇತನ, ಈಶ್ವರರೆಂಬ ತತ್ತ್ವ ತಿಳಿದವರು, ಅತಿಮುಚ್ಯ–ಈ ರೀತಿ ತಿಳಿದುಕೊಂಡು, ಪ್ರೇತ್ಯ–ಶರೀರವನ್ನು ಬಿಟ್ಟನಂತರ ಅಸ್ಮಾತ್ ಲೋಕಾತ್–ಈ ಪ್ರಕೃತಿಮಂಡಲದಿಂದ ವೈಕುಂಠ ಲೋಕಕ್ಕೆ ಹೋಗಿ, ಅಮೃತಾಃ ಭವಂತಿ–ಮರಣವಿಲ್ಲದವರಾಗಿ ಇರುತ್ತಾರೆ.

ತಾತ್ಪರ್ಯ—ಮೊದಲನೆಯ ಮಂತ್ರದಲ್ಲಿ ಕೇಳಲ್ಪಟ್ಟಿರುವ ಪ್ರಶ್ನೆಗೆ ಈ ಮಂತ್ರದಲ್ಲಿ ಉತ್ತರವು ಕೊಡಲ್ಪಟ್ಟಿರುವುದು. ಮನಸ್ಸಿಗೂ, ವಾಕ್ಕಿಗೂ, ಪ್ರಾಣಕ್ಕೂ, ಕಣ್ಣಿಗೂ, ಕಿವಿಗೂ ಅವುಗಳ ಕಾರ್ಯಗಳನ್ನು ಮಾಡಲು ಶಕ್ತಿಯನ್ನುಂಟುಮಾಡತಕ್ಕವನು ಪರಮಾತ್ಮನೇ ಎಂಬುದಾಗಿ ಚೇತನ, ಅಚೇತನ ಈಶ್ವರರ ನಿಜಸ್ಥಿತಿಯನ್ನು ತಿಳಿದುಕೊಂಡಿರತಕ್ಕವರು ಹೇಳುತ್ತಾರೆ. ಈ ರೀತಿಯಾಗಿ ತಿಳಿದುಕೊಂಡವರು ಈ ಶರೀರವನ್ನು ಬಿಟ್ಟನಂತರ ವೈಕುಂಠ ಲೋಕಕ್ಕೆ ಹೋಗಿ ಪುನರ್ಜನ್ಮವಿಲ್ಲದಂತೆ ಅಲ್ಲಿ ಶಾಶ್ವತವಾಗಿರುತ್ತಾರೆ.

ಮಂತ್ರ—ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್ ॥
ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ ।
ಇತಿ ಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ॥

ಈ ಮಂತ್ರವು, ಹಿಂದೆ ಹೇಳಲ್ಪಟ್ಟ ಪರಮಾತ್ಮ ಸ್ವರೂಪವನ್ನು ಮತ್ತಷ್ಟು ವಿಶದಪಡಿಸುವುದು.

ಅರ್ಥ—ತತ್ರ–ಆ ಪರಮಾತ್ಮನ ವಿಷಯದಲ್ಲಿ, ಚಕ್ಷುಃ–ಚಕ್ಷುರಿಂದ್ರಿಯವು, ನ ಗಚ್ಛತಿ-ಹೋಗಿ ತಿಳಿಯಲಾರದು. ವಾಕ್-ವಾಗಿಂದ್ರಿಯವೂ, ನ ಗಚ್ಛತಿ–ಹೋಗಿ ಹೇಳಲಾರದು. ಮನಃ–ಮನಸ್ಸೂ, ನೋ ಗಚ್ಛತಿ–

ಹೋಗಿ ತಿಳಿಯಲಾರದು. ಏತತ್–ಈ ಪರಬ್ರಹ್ಮನನ್ನು, ಯಥಾ–ಹೇಗೆ ಅನುಶಿಷ್ಯಾತ್–ಬೋಧಿಸಬೇಕು ಎಂಬುದನ್ನು, ನ ವಿದ್ಮಃ–ನಾವು ತಿಳಿದಿಲ್ಲ. ನ ವಿಜಾನೀಮಃ–ವಿಶೇಷಣದ ಮೂಲಕ ತಿಳಿಸುವುದನ್ನೂ ಕಂಡಿಲ್ಲ. ತತ್–ಆ ಪರಮಾತ್ಮ ಸ್ವರೂಪವು, ವಿದಿತಾತ್–ಇಷ್ಟೇ ಇದೆ ಎಂದು ಅಳತೆಮಾಡಿ ತಿಳಿಯತಕ್ಕ ವಸ್ತುವಿಗಿಂತಲೂ, ಅಥವಾ ಪಂಡಿತಪಾಮರಾದಿ ಸಕಲರಿಗೂ ತಿಳಿಯತಕ್ಕ ಜಡವಸ್ತುವಿಗಿಂತಲೂ, ಅವಿದಿತಾತ್–ಜ್ಞಾನಕ್ಕೆ ಗೋಚರವಾಗದ ಮೊಲದ ಕೊಂಬಿಗಿಂತಲೂ, ಅಥವಾ ಮೂಢರಿಂದ ತಿಳಿಯುವುದಕ್ಕಾಗದಂಥ ಜೀವಾತ್ಮನಿಗಿಂತಲೂ, ಅನ್ಯತ್–ಬೇರೆಯಾದುದು ಎಂಬುದಾಗಿ, ಯೇ–ಯಾವ ಗುರುಗಳು, ನಃ–ನಮಗೆ, ತತ್–ಆ ಪರಮಾತ್ಮಸ್ವರೂಪವನ್ನು, ವ್ಯಾಚಚಕ್ಷಿರೇ–ಉಪದೇಶ ಮಾಡಿದರೋ, ಪೂರ್ವೇಷಾಂ–ಪೂರ್ವಿಕರಾದ ಅವರಿಂದ, ಇತಿ–ಈ ಪ್ರಕಾರವಾಗಿ ಶುಶ್ರುಮಃ–ಕೇಳಿದ್ದೇವೆ.

ತಾತ್ಪರ್ಯ—ಇಂದ್ರಿಯ ಪ್ರಾಣಾದಿಗಳಿಗೆ ಪ್ರೇರಕನಾದ ಪರಮಾತ್ಮನು, ಈ ಲೋಕದಲ್ಲಿ ಪ್ರತ್ಯಕ್ಷಾನುಮಾನ ಶಬ್ದಗಳಿಂದ ತಿಳಿದುಬರತಕ್ಕ ವಸ್ತುಗಳಿಗಿಂತ ವಿಲಕ್ಷಣನು ಎಂಬ ಅಂಶವು ಈ ಮಂತ್ರದಲ್ಲಿ, ತಿಳಿಸಲ್ಪಡುತ್ತದೆ. ಹೇಗೆಂದರೆ, ಲೌಕಿಕ ವಸ್ತುಗಳನ್ನು ನಾಲ್ಕುಮೂಲೆ ಅಥವಾ ಮೂರು ಮೂಲೆ, ಗುಂಡು ಮೊದಲಾದ ಆಕಾರಗಳಿಂದ ಕೂಡಿರುವುದಾಗಿ ಇಷ್ಟೇ ಅಳತೆಯುಳ್ಳವುಗಳೆಂದು, ಕಣ್ಣು ಮೊದಲಾದ ಇಂದ್ರಿಯಗಳಿಂದ ತಿಳಿದುಕೊಳ್ಳುತ್ತೇವೆ. ಮತ್ತು ಹೊಗೆ ಇದ್ದ ಜಾಗದಲ್ಲಿ ಬೆಂಕಿಯೂ ಒಟ್ಟಿಗೆ ಇರುವುದನ್ನು ಅನೇಕಾವರ್ತಿ ನೋಡಿದವನು. ಹೊಗೆಯನ್ನು ಮಾತ್ರ ಕಂಡಾಗ ಇಲ್ಲಿ ಬೆಂಕಿಯೂ ಇದೆ ಎಂದು ಅನುಮಾನ ಎಂದರೆ ಊಹೆಯಿಂದ ಬೆಂಕಿಯನ್ನು ತಿಳಿದುಕೊಳ್ಳುತ್ತಾನೆ. ಈ ಊಹೆಗೂ ಅವಕಾಶವಿಲ್ಲದೆ ಇರುವ ವಸ್ತುವನ್ನು ತನಗೆ ಆಪ್ತನಾದ ಮತ್ತೊಬ್ಬನು ಕಂಡಿದ್ದು ಅವನು ಶಬ್ದದ ಮೂಲಕ ತಿಳಿಸಿದ್ದರೆ ಅದರ ಮೂಲಕ ಆ ವಸ್ತುವನ್ನೂ ತಿಳಿದುಕೊಳ್ಳುತ್ತಾನೆ. ಹೀಗೆ ಲೌಕಿಕ ವಸ್ತುಗಳು, ಪ್ರತ್ಯಕ್ಷ, ಆ ಪ್ರತ್ಯಕ್ಷ ಮೂಲಕವಾದ ಅನುಮಾನ, ಪ್ರತ್ಯಕ್ಷ ಮೂಲಕವಾದ ಲೌಕಿಕ ಶಬ್ದಗಳಿಂದ ಅಳತೆಮಾಡಲ್ಪಟ್ಟು ತಿಳಿದುಬರುವುವು. ಪರಮಾತ್ಮನು ಅಳತೆ ಇಲ್ಲದವನಾದುದರಿಂದ ಈ ಮೂರುವಿಧವಾದ ಲೌಕಿಕ

ಪ್ರಮಾಣಗಳಿಗೆ ಗೋಚರನಾಗುವುದಿಲ್ಲ. ಬಿಸಿಲ್ಗುದುರೆ, ಮೊಲದ ಕೊಂಬು ಮೊದಲಾದುವು ಇಲ್ಲವೇ ಇಲ್ಲವಾದುದರಿಂದ ಜ್ಞಾನಕ್ಕೆ ಗೋಚರವಾಗುವುದಿಲ್ಲ. ಆದರಂತೆ ಪರಮಾತ್ಮ ಸ್ವರೂಪವು ತುಚ್ಛವಲ್ಲದುದರಿಂದ, ಅವುಗಳಿಗಿಂತ ಬೇರೆಯಾದುದು. ಅಥವಾ ಪಂಡಿತ ಪಾಮರರಾದ ಎಲ್ಲರೂ ತಿಳಿದುಕೊಳ್ಳ ತಕ್ಕ ಜಡವಸ್ತುವಿಗಿಂತ ವಿಲಕ್ಷಣನು. ಭಗವದ್ಗೀತೆಯಲ್ಲಿ, "ಜೀವಾತ್ಮನನ್ನು ಮೂಢರು ತಿಳಿದುಕೊಳ್ಳುವುದಿಲ್ಲ ; ಜ್ಞಾನಚಕ್ಷುಸ್ಸುಳ್ಳವರು ತಿಳಿದುಕೊಳ್ಳು ತ್ತಾರೆ" ಎಂದು ಹೇಳಿರುವ ಪ್ರಕಾರ ಮೂಢರಿಗೆ ತಿಳಿಯದಂಥ ಜೀವಾತ್ಮನಿ ಗಿಂತಲೂ ಪರಮಾತ್ಮ ಸ್ವರೂಪವು ಬೇರೆಯಾದುದೆಂದು ಪೂರ್ವಾಚಾರ್ಯರು ಪರಮಾತ್ಮ ಸ್ವರೂಪವನ್ನು ಶಿಷ್ಯರಿಗೆ ಉಪದೇಶಮಾಡಿರುತ್ತಾರೆ. ಇದರಿಂದ ಪರಮಾತ್ಮ ಸ್ವರೂಪವು ಲೌಕಿಕಪ್ರಮಾಣ ಗೋಚರಗಳಾದ ಚೇತನಾಚೇತನ ಗಳಿಗಿಂತ ವಿಲಕ್ಷಣವಾದ ಅಲೌಕಿಕಶಬ್ದ ಪ್ರಮಾಣದಿಂದ ತಿಳಿದುಬರುವ ಅಳತೆಯಿಲ್ಲದಂಥ ವಸ್ತು ಎಂದು ತಿಳಿಸಿದಂತಾಯಿತು.

ಮಂತ್ರ—ಯದ್ವಾಚಾನಭ್ಯುದಿತಂ ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥೪॥

ಅರ್ಥ— ಯತ್–ಯಾವ ಪರಮಾತ್ಮ ಸ್ವರೂಪವು, ವಾಚಾ–ವಾಕ್ಕೆಂಬ ಇಂದ್ರಿಯದಿಂದ ಅನಭ್ಯುದಿತಂ–ಪ್ರಕಾಶಪಡಿಸಲ್ಪಡತಕ್ಕದ್ದಲ್ಲವೋ, ಯೇನ– ಯಾವ ಪರಮಾತ್ಮನಿಂದ, ವಾಕ್–ವಾಗಿಂದ್ರಿಯವು, ಅಭ್ಯುದ್ಯತೇ–ಪ್ರಕಾಶ ಪಡಿಸಲ್ಪಡುವುದೋ, ತದೇವ-ಅದನ್ನೇ, ತ್ವಂ–ನೀನು, ಬ್ರಹ್ಮ-ಪರಬ್ರಹ್ಮನಾಗಿ, ವಿದ್ಧಿ–ತಿಳಿ, ಯತ್–ಯಾವ ವಸ್ತುವನ್ನು, ಇದಂ–ಈ ಆಕಾರವುಳ್ಳದ್ದು ಎಂದು, ಉಪಾಸತೇ–ಲೋಕದ ಜನರು ಕಾಣುತ್ತಾರೆಯೋ, ತತ್–ಅದು, ಬ್ರಹ್ಮ ನ–ಪರಬ್ರಹ್ಮವಲ್ಲ.

ತಾತ್ಪರ್ಯ—ಪರಮಾತ್ಮನು, ವೇದ ಮೊದಲಾದ ಎಲ್ಲಾ ವಾಕ್ಕು ಗಳನ್ನೂ ಪ್ರಕಾಶಪಡಿಸತಕ್ಕವನು. ಆ ಪರಮಾತ್ಮನ ಸ್ವರೂಪವನ್ನು ಇಷ್ಟೆಂದು ಅಳತೆ ಮಾಡಿ ಹೇಳಲು, ವೇದ ಮೊದಲಾದ ಯಾವ ಶಬ್ದ ಗಳಿಗೂ ಸಾಮರ್ಥ್ಯವಿರುವುದಿಲ್ಲ. ಅವುಗಳು, ಪರಮಾತ್ಮನ ಸ್ವರೂಪವನ್ನು

ಹೇಳುವುದಕ್ಕಾರಂಭಿಸಿ ಕೈಲಾದಷ್ಟು ಹೇಳಿ, ಸೋತು ಹೋಗುವುವು. ಪರಮಾತ್ಮನ ಸ್ವರೂಪವು ಅಳತೆಯಿಲ್ಲದೇ ಇನ್ನೂ ದೊಡ್ಡದಾಗಿರುವುದರಿಂದ ಆ ರೀತಿಯಾಗುವುವು. ಲೋಕದ ಜನರು ಯಾವ ವಸ್ತುವನ್ನು, ಕೈಯಲ್ಲಿರುವ ನೆಲ್ಲಿಯಕಾಯಿಯ ಹಾಗೆ ಅಳತೆಮಾಡಿ ತಿಳಿದು ಕೊಳ್ಳುತ್ತಾರೆಯೋ ಆ ವಸ್ತುವು, ಪರಬ್ರಹ್ಮವಲ್ಲ. ಪರಬ್ರಹ್ಮವು, ಅಳತೆಯಿಲ್ಲದ ವಸ್ತುವೆಂದು ಭಾವ.

ಮಂತ್ರ — ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಂ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ।೫॥

ಅರ್ಥ— ಯತ್–ಯಾವ ಪರಮಾತ್ಮ ಸ್ವರೂಪವನ್ನು, ಮನಸಾ–ಮನಸ್ಸಿನಿಂದ, ನ ಮನುತೇ–(ಯಾವ ಮನುಷ್ಯನೂ ಇದು ಹೀಗೇ ಇದೆ ಎಂದು) ತಿಳಿದುಕೊಳ್ಳಲಾರನೋ, ಯೇನ–ಯಾವ ಪರಮಾತ್ಮನಿಂದ, ಮನಃ-ಮನಸ್ಸು, ಮತಂ–ತಿಳಿಯಲ್ಪಡುತ್ತದೆಯೋ, ತದೇವ ತ್ವಂ ಬ್ರಹ್ಮಂ ವಿದ್ಧಿ–ಅದನ್ನೇ ನೀನು ಬ್ರಹ್ಮನೆಂದು ತಿಳಿ, ಯತ್ ಇದಂ ಉಪಾಸತೇ ತತ್ ಬ್ರಹ್ಮ ನ–ಇದು ಎಂದು ಲೋಕದ ಜನರು ತಿಳಿದು ಕೊಳ್ಳುವ ವಸ್ತು ಪರಬ್ರಹ್ಮನಲ್ಲ.

ತಾತ್ಪರ್ಯ— ಎಲ್ಲ ಮನಸ್ಸನ್ನೂ ತಿಳಿದುಕೊಳ್ಳತಕ್ಕ ಪರಮಾತ್ಮನನ್ನು ಎಲ್ಲರೂ ತಮ್ಮ ಮನಸ್ಸಿನಿಂದಲೂ ಇಷ್ಟೆಂದು ಅಳತೆ ಮಾಡಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆ ಪರಮಾತ್ಮ ಸ್ವರೂಪದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ತಿಳಿಯುತ್ತಾರೆ. ಅದು ಇವರ ಮನಸ್ಸಿಗೆ ಗೋಚರವಾಗುವುದಕ್ಕಿಂತಲೂ ದೊಡ್ಡದಾಗಿರುವುದು. ಲೋಕದಲ್ಲಿ ಇಷ್ಟೆಂದು ಅಳತೆ ಮಾಡಿ ಮನಸ್ಸಿನಿಂದ ತಿಳಿಯತಕ್ಕವಸ್ತುವು ಪರಮಾತ್ಮನಲ್ಲ. ಅದು ಅದಕ್ಕಿಂತ ಬೇರೆಯಾದುದು.

ಮಂತ್ರ— ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ॥೬॥

ಅರ್ಥ—ಯತ್–ಯಾವ ಪರಮಾತ್ಮಸ್ವರೂಪವನ್ನು, ಚಕ್ಷುಷಾ–ಕಣ್ಣಿನಿಂದ, ನ ಪಶ್ಯತಿ–(ಯಾವನೂ) ನೋಡಲಾರನೋ, ಯೇನ–ಯಾವ ಪರಮಾತ್ಮನಿಂದ, ಚಕ್ಷೂಂಷಿ–ಕಣ್ಣುಗಳು, ಪಶ್ಯತಿ–ರೂಪವನ್ನು ನೋಡುತ್ತ

ವೆಯೋ, ತದೇವ ತ್ವಂ ಬ್ರಹ್ಮ ವಿದ್ಧಿ–ಅದನ್ನೇ ನೀನು ಬ್ರಹ್ಮನೆಂದು ತಿಳಿ. ಯತ್ ಇದಂ ಉಪಾಸತೇ ತತ್ ಬ್ರಹ್ಮ ನ–(ಇದರ ಅರ್ಥ ಹಿಂದಿನ ಮಂತ್ರದ ಹಾಗೆ)

ತಾತ್ಪರ್ಯ—ಪರಮಾತ್ಮನನ್ನು ನಮ್ಮ ಕಣ್ಣಿನಿಂದ ತಿಳಿಯಲು ಆಗುವುದಿಲ್ಲ. ಆ ಪರಮಾತ್ಮನು ನಮ್ಮ ಕಣ್ಣಿಗೆ ರೂಪ ಮೊದಲಾದುವನ್ನು ನೋಡತಕ್ಕ ಶಕ್ತಿಯನ್ನು ಕೊಡತಕ್ಕವನು. ಅವನು ಅಳತೆಯಿಲ್ಲದ ವಸ್ತುವು.

ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಂ ಶ್ರುತಂ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥೭॥

ಅರ್ಥ—ಯತ್–ಯಾವ ಪರಮಾತ್ಮ ಸ್ವರೂಪವನ್ನು, ಶ್ರೋತ್ರೇಣ–ಕಿವಿಯಿಂದ, ನ ಶೃಣೋತಿ–(ಯಾವನೂ) ಕೇಳಲಾರನೋ, ಯೇನ–ಯಾವ ಪರಮಾತ್ಮನಿಂದ, ಇದಂ ಶ್ರೋತ್ರಂ–ಈ ಕಿವಿಯು, ಶ್ರುತಂ–ಕೇಳಲು ಶಕ್ತಿಯುಳ್ಳದ್ದಾಗುವುದೋ, ತದೇವ ತ್ವಂ ಬ್ರಹ್ಮ ವಿದ್ಧಿ–ಅವನನ್ನೇ ನೀನು ಬ್ರಹ್ಮನೆಂದು ತಿಳಿ. ಯತ್ ಇದಂ ಉಪಾಸತೇ ತತ್ ಬ್ರಹ್ಮ ನ–ಇದರ ಅರ್ಥ ಹಿಂದಿನ ಮಂತ್ರದ ಹಾಗೆ.

ತಾತ್ಪರ್ಯ—ಪರಮಾತ್ಮನನ್ನು ಶ್ರೋತ್ರೇಂದ್ರಿಯದಿಂದಲೂ ತಿಳಿಯಲು ಸಾಧ್ಯವಿಲ್ಲ. ಅವನು ಶ್ರೋತ್ರೇಂದ್ರಿಯಕ್ಕೆ ಶಬ್ದವನ್ನು ತಿಳಿದುಕೊಳ್ಳುವ ಶಕ್ತಿ ಕೊಡುವವನು. ಅವನು ಅಳತೆಯಿಲ್ಲದ ವಸ್ತುವು.

ಮಂತ್ರ—ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥೮॥

ಅರ್ಥ—ಯತ್–ಯಾವ ಪರಮಾತ್ಮನ ಸ್ವರೂಪವು, ಪ್ರಾಣೇನ–ಪ್ರಾಣವಾಯುವಿನಿಂದ, ನ ಪ್ರಾಣಿತಿ–ಉಸಿರಾಡುವ ಕೆಲಸವುಳ್ಳದ್ದಾಗುವುದಿಲ್ಲವೋ, ಯೇನ–ಯಾವ ಪರಮಾತ್ಮನಿಂದ, ಪ್ರಾಣಃ–ಪ್ರಾಣವಾಯುವು, ಪ್ರಣೀಯತೇ–ಉಸಿರಾಡುವ ಕೆಲಸ ಮಾಡಲು ಶಕ್ತಿಯುಳ್ಳದ್ದಾಗುವುದೋ,

ತದೇವ ತ್ವಂ ಬ್ರಹ್ಮ ವಿದ್ಧಿ–ಅದನ್ನೇ ನೀನು ಬ್ರಹ್ಮನೆಂದು ತಿಳಿ. ಯತ್ ಇದಂ ಉಪಾಸತೇ ತತ್ ಬ್ರಹ್ಮ ನ–ಹಿಂದಿನ ಮಂತ್ರದಂತೆ.

ತಾತ್ಪರ್ಯ—ಪರಮಾತ್ಮನು ಪ್ರಾಣವಾಯುವಿನ ಸಹಾಯದಿಂದ ಉಸಿರಾಡುವುದಿಲ್ಲ. ಈ ಪ್ರಾಣವಾಯುವಿಗೆ ಉಸಿರಾಡುವ ಶಕ್ತಿ ಕೊಡತಕ್ಕವನು. ಅವನು ಅಳತೆಯಿಲ್ಲದ ವಸ್ತುವು.

ಹೀಗೆ ವಾಕ್ಕು, ಮನಸ್ಸು, ಚಕ್ಷುಸ್ಸು, ಶ್ರೋತ್ರ, ಪ್ರಾಣಗಳಿಗೆಲ್ಲಾ ಶಕ್ತಿಯನ್ನು ಕೊಡತಕ್ಕ, ಅವುಗಳಿಂದ ಇಷ್ಟೆಂದು ಅಳತೆಮಾಡಿ ತಿಳಿಯುವುದಕ್ಕಾಗದಂಥ, ಅವುಗಳಿಗಿಂತ ಬೇರೆಯಾದ ಅಳತೆಯಿಲ್ಲದ ದೊಡ್ಡ ವಸ್ತುವೇ ಪರಮಾತ್ಮನು ಎಂದು ಈ ಖಂಡದ ಮುಖ್ಯ ತಾತ್ಪರ್ಯವು.

ಇಲ್ಲಿಗೆ ಮೊದಲನೆಯ ಖಂಡವು ಮುಗಿಯಿತು

ದ್ವಿತೀಯಃ ಖಂಡಃ

ಮಂತ್ರ—ಯದಿ ಮನ್ಯಸೇ ಸು ವೇದೇತಿ ದಭ್ರಮೇವಾಪಿ
ನೂನಂ ತ್ವಂ ವೇತ್ಥ ಬ್ರಹ್ಮಣೋ ರೂಪಂ ।
ಯದಸ್ಯ ತ್ವಂ ಯದಸ್ಯ ದೇವೇಷ್ವಥ ನು
ಮೀಮಾಂಸ್ಯಮೇವ ತೇ ಮನ್ಯೇ ವಿದಿತಮ್ ॥ ೧ ॥

ಅರ್ಥ—ಸುವೇದ ಇತಿ–(ನಾನು ಬ್ರಹ್ಮಸ್ವರೂಪವನ್ನು) ಚನ್ನಾಗಿ ತಿಳಿದಿದ್ದೇನೆ ಎಂದು, ತ್ವಂ ಮನ್ಯಸೇ ಯದಿ–ನೀನು ತಿಳಿದುಕೊಂಡಿದ್ದದ್ದೇ ಆದರೆ, ದಭ್ರಮೇವ–(ಅದು) ಅತ್ಯಲ್ಪವೇ ಸರಿ, ನೂನಂ–ನಿಶ್ಚಯವು. ಅಸ್ಯ ಬ್ರಹ್ಮಣಃ ರೂಪಂ–ಈ ಪರಬ್ರಹ್ಮಸ್ವರೂಪವನ್ನು, ಅಸ್ಯ–ಈ ಲೋಕದಲ್ಲಿ, ತ್ವಂ–ನೀನು, ಯತ್-ಯಾವುದನ್ನು, ವೇತ್ಥ-ತಿಳಿಯುತ್ತೀಯೋ, ದೇವೇಷು–ದೇವಲೋಕದಲ್ಲಿ, ಯತ್–ಯಾವುದನ್ನು, ವೇತ್ಥ–ತಿಳಿಯುತ್ತೀಯೋ, ದಭ್ರಮೇವ–(ಅದು) ಅತ್ಯಲ್ಪವೇ ಆಗಿರುತ್ತದೆ. ಅಥ ನು–ಆದಕ್ಕೆ ಮೇಲೆ, ತೇ–ನಿನ್ನಿಂದ, ಮೀಮಾಂಸ್ಯಮೇವ–(ಬ್ರಹ್ಮಸ್ವರೂಪವು) ವಿಚಾರಿಸಲ್ಪಡ

ತಕ್ಕದ್ದೇ ಆಗಿರುವುದು. ವಿದಿತಂ-(ಬ್ರಹ್ಮಸ್ವರೂಪವು) ನನಗೆ ತಿಳಿಯಿತು ಎಂದು, ಮನ್ಯೇ-ಊಹಿಸುತ್ತೇನೆ.

ತಾತ್ಪರ್ಯ— ಈ ಲೋಕದಲ್ಲಿಯೂ, ದೇವಲೋಕದಲ್ಲಿಯೂ ಇರತಕ್ಕ ಪರಮಾತ್ಮನ ವಿಭವರೂಪಗಳನ್ನೂ ವ್ಯೂಹರೂಪಗಳನ್ನೂ ತಿಳಿದು ನಾನು ಪರಮಾತ್ಮಸ್ವರೂಪವನ್ನು ಚನ್ನಾಗಿ ತಿಳಿದಿದ್ದೇನೆ ಎಂದು ನೀನು ನಂಬಿದ್ದರೆ, ನೀನು ತಿಳಿದುಕೊಂಡಿರುವುದು, ಪರಮಾತ್ಮ ಸ್ವರೂಪದಲ್ಲಿ ಸ್ವಲ್ಪಭಾಗ ಮಾತ್ರವೇ; ನೀನು ಪರಮಾತ್ಮ ಸ್ವರೂಪವನ್ನು ಇನ್ನೂ ವಿಚಾರಮಾಡಿ ತಿಳಿದುಕೊಳ್ಳಬೇಕು ಎಂದು ಗುರುವು ಶಿಷ್ಯನಿಗೆ ಹೇಳಿದನು. ಈಗ ವಿಚಾರ ಮಾಡಿದುದರಿಂದ ಪರಮಾತ್ಮ ಸ್ವರೂಪವು ನನಗೆ ತಿಳಿಯಿತು ಎಂದು ಶಿಷ್ಯನು ಗುರುವನ್ನು ಕುರಿತು ಹೇಳಿದನು.

ಮಂತ್ರ–ನಾಹಂ ಮನ್ಯೇ ಸು ವೇದೇತಿ ನೋ ನ ವೇದೇತಿ ವೇದ ಚ।
ಯೋ ನಸ್ತದ್ವೇದ ತದ್ವೇದ ನೋ ನ ವೇದೇತಿ ವೇದ ಚ॥೨॥

ಅರ್ಥ—ಅಹಂ–ನಾನು, ಸುವೇದ–ಚನ್ನಾಗಿ ತಿಳಿದಿದ್ದೇನೆ, ಇತಿ–ಎಂದು, ನ ಮನ್ಯೇ–ಊಹಿಸುವುದಿಲ್ಲ. ನ ವೇದ–ತಿಳಿದುಕೊಂಡಿಲ್ಲ, ಇತಿ–ಎಂದೂ, ನೋ-ಇಲ್ಲ, ವೇದ ಚ–ಸ್ವಲ್ಪ ತಿಳಿದುಕೊಂಡಿದ್ದೇನೆ. ನೋ ನ ವೇದ ಇತಿ ವೇದ ಚ–ಹೀಗೆ ನಾನು ಹೇಳಿರುವ ಈ ವಾಕ್ಯದ ಅರ್ಥವನ್ನು, ನಃ–ನಮ್ಮೊಳಗೆ, ಯಃ–ಯಾವ ಸಹಾಧ್ಯಾಯಿಯು, ವೇದ–ತಿಳಿದಿದ್ದಾನೆಯೋ, (ಅವನು) ತತ್–ಆ ಪರಬ್ರಹ್ಮ ಸ್ವರೂಪವನ್ನು, ವೇದ–ತಿಳಿದು ಕೊಂಡಿದ್ದಾನೆ.

ತಾತ್ಪರ್ಯ—'ವಿಚಾರ ಮಾಡಿದ ಮೇಲೆ ನನಗೆ ಪರಬ್ರಹ್ಮಸ್ವರೂಪವು ತಿಳಿಯಿತು, ಎಂದು ಹೇಳಿದೆಯಲ್ಲಾ, ನಿನಗೆ ಯಾವರೀತಿ ತಿಳಿಯಿತು ಎಂದು ಗುರುವು ಶಿಷ್ಯನನ್ನು ಕೇಳಲು, ಶಿಷ್ಯನು ಹೇಳುತ್ತಾನೆ–" ನನಗೆ ಪರಮಾತ್ಮ ಸ್ವರೂಪವೆಲ್ಲಾ ಪೂರ್ತಿಯಾಗಿ ತಿಳಿಯಿತು ಎಂದೂ ನಾನು ತಿಳಿದು ಕೊಂಡಿಲ್ಲ. ಪರಮಾತ್ಮ ಸ್ವರೂಪದಲ್ಲಿ ಏನೂ ತಿಳಿದಿಲ್ಲ ಎಂದೂ ತಿಳಿದು ಕೊಂಡಿಲ್ಲ. ಸ್ವಲ್ಪ ತಿಳಿದುಕೊಂಡಿದ್ದೇನೆ ಎಂಬುದಾಗಿ ಊಹಿಸುತ್ತೇನೆ."

ಪರಮಾತ್ಮನ ಸ್ವರೂಪವನ್ನು ಪೂರ್ತಿಯಾಗಿ ತಿಳಿಯುವುದಕ್ಕಾಗುವುದಿಲ್ಲ. ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳಬಹುದು–ತಿಳಿಯಲೇ ಇಲ್ಲ ಎಂದೂ ಹೇಳುವುದಕ್ಕಾಗುವುದಿಲ್ಲ ಎಂದು ತಿಳಿಯತಕ್ಕವರಿಗೆ ಪರಮಾತ್ಮನ ಸ್ವರೂಪವು ತಿಳಿದಿರುತ್ತದೆ ಎಂಬುದಾಗಿ ಭಾವ.

ಮಂತ್ರ— ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಂ ॥೩॥

ಅರ್ಥ – ಯಸ್ಯ-ಯಾವನ ಬುದ್ಧಿಯಿಂದ, (ಪರಬ್ರಹ್ಮವು) ಅಮತಂ–ಪೂರ್ತಿಯಾಗಿ ತಿಳಿಯಲ್ಪಟ್ಟಿಲ್ಲವೋ, ತಸ್ಯ–ಅವನಿಂದ, ಮತಂ–(ಬ್ರಹ್ಮಸ್ವರೂಪವು) ತಿಳಿಯಲ್ಪಟ್ಟಿರುತ್ತದೆ. ಯಸ್ಯ ಮತಂ–ಯಾವನ ಬುದ್ಧಿಯಿಂದ ಬ್ರಹ್ಮಸ್ವರೂಪವು ಪೂರ್ತಿಯಾಗಿ ತಿಳಿಯಲ್ಪಟ್ಟಿತೆಂಬ ಅಭಿಮಾನವಿದೆಯೋ ತಸ್ಯ–ಅಂಥಾವನಿಂದ ಅಮತಂ– (ಬ್ರಹ್ಮಸ್ವರೂಪವು) ತಿಳಿಯಲ್ಪಟ್ಟಿಲ್ಲ. ವಿಜಾನತಾಂ–ಬ್ರಹ್ಮಸ್ವರೂಪವನ್ನೆಲ್ಲಾ ಚನ್ನಾಗಿ ತಿಳಿದಿರುತ್ತೇನೆಂದು ಅಭಿಮಾನವುಳ್ಳವರಿಗೆ, ಅವಿಜ್ಞಾತಂ–ಬ್ರಹ್ಮಸ್ವರೂಪವು ತಿಳಿದಿಲ್ಲ. ಅವಿಜಾನತಾಂ–ಬ್ರಹ್ಮಸ್ವರೂಪವನ್ನೆಲ್ಲಾ ತಿಳಿದಿದ್ದೇನೆಂಬ ಅಭಿಮಾನವಿಲ್ಲದೇ ಸ್ವಲ್ಪಭಾಗಮಾತ್ರ ತಿಳಿದಿದ್ದೇನೆ ಎಂಬುವರಿಗೆ, ವಿಜ್ಞಾತಂ–ಬ್ರಹ್ಮಸ್ವರೂಪವು ತಿಳಿದಿರುತ್ತದೆ.

ತಾತ್ಪರ್ಯ— ಬ್ರಹ್ಮಸ್ವರೂಪವು ಅಳತೆಯಿಲ್ಲದ್ದು ಎಂದು ತಿಳಿದುಕೊಂಡಿರುವವನು ಬ್ರಹ್ಮಜ್ಞಾನಿಯು. ಅಳತೆಯುಳ್ಳದ್ದು ಎಂದು ತಿಳಿದುಕೊಂಡಿರುವವನು ಬ್ರಹ್ಮಜ್ಞಾನಿಯಲ್ಲ.

ಮಂತ್ರ— ಪ್ರತಿಬೋಧವಿದಿತಂ ಮತಮಮೃತತ್ವಂ ಹಿ ವಿಂದತೇ ।
ಆತ್ಮನಾ ವಿಂದತೇ ವೀರ್ಯಂ ವಿದ್ಯಯಾ ವಿಂದತೇಽಮೃತಂ॥೪॥

ಅರ್ಥ—ಪ್ರತಿಬೋಧ–ಸತ್ಯತ್ವ, ಜ್ಞಾನತ್ವ, ಅನಂತತ್ವಗಳೆಂಬ ಅಸಾಧಾರಣ ಧರ್ಮಗಳಿಂದ, ವಿದಿತಂ– (ಬ್ರಹ್ಮಸ್ವರೂಪವು) ತಿಳಿಯಲ್ಪಟ್ಟರೆ, ಮತಂ–(ಅಂಥಾವನಿಂದ) ಬ್ರಹ್ಮಸ್ವರೂಪವು ತಿಳಿಯಲ್ಪಟ್ಟಿದೆ. ಅಮೃತತ್ವಂ–

(ಅವನು) ಮೋಕ್ಷವನ್ನು, ವಿಂದತೇ–ಪಡೆಯುತ್ತಾನೆ. ಆತ್ಮನಾ–ಅನುಗ್ರಹ ದಿಂದ ಕೂಡಿದ ಪರಮಾತ್ಮನಿಂದ, ವೀರ್ಯಂ–ಉಪಾಸನೆ ಪೂರ್ತಿಯಾಗುವಂಥಾ ಮನಸ್ಸಿನ ದಾರ್ಢ್ಯವನ್ನು, ವಿಂದತೇ–ಪಡೆಯುತ್ತಾನೆ. ವಿದ್ಯಯಾ–ಪೂರ್ಣ ವಾದಂಥ ಅಂಥ ಉಪಾಸನೆಯಿಂದ, ಅಮೃತಂ–ಮೋಕ್ಷವನ್ನು, ವಿಂದತೇ–ಪಡೆಯುತ್ತಾನೆ.

ತಾತ್ಪರ್ಯ—ಪರಮಾತ್ಮನಲ್ಲಿಯೇ ಇರತಕ್ಕ, ಸತ್ಯತ್ವ–ಒಂದೇ ವಿಧ ವಾಗಿರುವಿಕೆ, ಜ್ಞಾನತ್ವ–ಯಾವಾಗಲೂ ಸಂಕೋಚವಿಲ್ಲದೆ ಪ್ರಕಾಶವಾಗಿರು ವಿಕೆ, ಅನಂತತ್ವ–ದೇಶ, ಕಾಲ, ವಸ್ತುಗಳಿಂದ ಅಳತೆ ಮಾಡಲ್ಪಡದಿರುವಿಕೆ ಈ ಅಸಾಧಾರಣ ಧರ್ಮಗಳಿಂದ ಪರಮಾತ್ಮ ಸ್ವರೂಪವನ್ನು ವೇದಶಾಸ್ತ್ರದ ಮೂಲಕ ಇತರ ವಸ್ತುಗಳಿಗಿಂತ ವಿಲಕ್ಷಣನನ್ನಾಗಿ ತಿಳಿದುಕೊಂಡು ಅವ ನನ್ನು ನಿರಂತರ ಧ್ಯಾನಮಾಡಿದರೆ, ಅವನು ಪ್ರಸನ್ನನಾಗಿ ಆ ಧ್ಯಾನವು ಪೂರ್ತಿಯಾಗತಕ್ಕ ಶಕ್ತಿಯನ್ನು ಕೊಡುತ್ತಾನೆ. ಈ ಧ್ಯಾನದಿಂದ ಪುನರ್ಜನ್ಮ ವಿಲ್ಲದ ಮೋಕ್ಷವನ್ನು ಅವನು ಪಡೆಯುತ್ತಾನೆ.

ಮಂತ್ರ—**ಇಹ ಚೇದವೇದೀದಥ ಸತ್ಯಮಸ್ತಿ**
ನ ಚೇದಿಹಾವೇದೀನ್ಮಹತೀ ವಿನಷ್ಟಿಃ ।
ಭೂತೇಷು ಭೂತೇಷು ವಿಚಿತ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ ೫ ॥

ಅರ್ಥ—ಇಹ–(ಶಾಸ್ತ್ರಾಧಿಕಾರಕ್ಕೆ ಯೋಗ್ಯವಾದ) ಈ ಜನ್ಮದಲ್ಲಿಯೇ, ಅವೇದೀತ್ ಚೇತ್–(ಬ್ರಹ್ಮಸ್ವರೂಪವನ್ನು) ತಿಳಿದುಕೊಂಡರೆ, ಅಥ–ಕೂಡಲೇ, ಸತ್ಯಂ ಅಸ್ತಿ–ಶಾಶ್ವತವಾದ ಫಲವಿರುತ್ತದೆ, ನ ಅವೇದೀತ್ ಚೇತ್–ತಿಳಿದುಕೊಳ್ಳದೇ ಇದ್ದರೆ, ಮಹತೀ ವಿನಷ್ಟಿಃ–ದೊಡ್ಡ ಕೇಡುಂಟಾಗು ವುದು, ಧೀರಾಃ–ಆತ್ಮತತ್ತ್ವವನ್ನರಿತವರು, ಭೂತೇಷು ಭೂತೇಷು–ಎಲ್ಲಾ ಪ್ರಾಣಿಗಳಲ್ಲಿಯೂ (ಅಂತರ್ಯಾಮಿಯಾಗಿರತಕ್ಕ ಪರಮಾತ್ಮನನ್ನು) ವಿಚಿಂತ್ಯ–ಆ ಪ್ರಾಣಿಗಳಿಗಿಂತ ವಿಲಕ್ಷಣನನ್ನಾಗಿ ನಿಶ್ಚಯಿಸಿ, ಅಸ್ಮಾತ್ ಲೋಕಾತ್–ಈ ಲೋಕದಿಂದ, ಪ್ರೇತ್ಯ–ಹೊರಟು, ಅಮೃತಾಃ ಭವಂತಿ–ಮೋಕ್ಷವನ್ನು ಪಡೆಯುತ್ತಾರೆ.

ತಾತ್ಪರ್ಯ—ಶಾಸ್ತ್ರಾಭ್ಯಾಸವನ್ನು ಮಾಡಿ ಬ್ರಹ್ಮಜ್ಞಾನವನ್ನು ಸಂಪಾದಿಸುವುದಕ್ಕೆ ಅರ್ಹವಾದ ಈ ಮನುಷ್ಯಜನ್ಮ ಬಂದಿರುವಾಗಲೇ ಬ್ರಹ್ಮಜ್ಞಾನವನ್ನು ಪಡೆದು ಪ್ರತಿಯೊಂದು ಪ್ರಾಣಿಯಲ್ಲಿಯೂ ಅಂತರ್ಯಾಮಿಯಾಗಿರುವ ಪರಮಾತ್ಮನನ್ನು ಆ ಪ್ರಾಣಿಗಳಿಗಿಂತ ವಿಲಕ್ಷಣನೆಂದು ನಿಶ್ಚಯಿಸಿಕೊಂಡು, ಅವನನ್ನು ನಿರಂತರ ಧ್ಯಾನಮಾಡಿ ಅವನ ಅನುಗ್ರಹ ಪಡೆದರೆ ಈ ಸಂಸಾರ ದುಃಖವೂ ನರಕದುಃಖವೂ ತಪ್ಪಿ ಶಾಶ್ವತವಾದ ಪರಬ್ರಹ್ಮಪ್ರಾಪ್ತಿಯೆಂಬ ಮೋಕ್ಷವು ಈ ಜೀವನು ಈ ಶರೀರವನ್ನು ಬಿಟ್ಟನಂತರ ವೈಕುಂಠಲೋಕದಲ್ಲಿ ಸಿಕ್ಕುವುದು. ಹಾಗೆ ಇಲ್ಲದೇ ಇದ್ದರೆ ಮಹಾನರ್ಥವುಂಟಾಗುವುದು—ಎಂದು ಬ್ರಹ್ಮವಿದ್ಯೆಯಲ್ಲಿ ತ್ವರೆಮಾಡಬೇಕೆಂದು ಈ ಮಂತ್ರದಲ್ಲಿ ಉಪದೇಶ ಮಾಡಲಾಗಿದೆ.

—ಎರಡನೆಯ ಖಂಡ ಮುಗಿಯಿತು—

ತೃತೀಯಃ ಖಂಡಃ

ಮಂತ್ರ—ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ ।
(ಅಥ) ತಸ್ಯ ಹ ಬ್ರಹ್ಮಣೋ
ವಿಜಯೇ ದೇವಾ ಅಮಹೀಯಂತ ।
ತ ಐಕ್ಷಂತಾಸ್ಮಾಕಮೇವಾಯಂ
ವಿಜಯೋಽಸ್ಮಾಕಮೇವಾಯಂ ಮಹಿಮೇತಿ ॥ ೧ ॥

ಅರ್ಥ—ಬ್ರಹ್ಮ–ಪರಬ್ರಹ್ಮನು, ದೇವೇಭ್ಯಃ–ದೇವತೆಗಳ ಅನುಗ್ರಹಕ್ಕಾಗಿ, ವಿಜಿಗ್ಯೇ–(ರಾಕ್ಷಸರನ್ನು) ಜಯಿಸಿದನು. ತಸ್ಯ ಪರಬ್ರಹ್ಮಣಃ–ಆ ಪರಬ್ರಹ್ಮನಿಗೆ, ವಿಜಯೇ–ಜಯವುಂಟಾಗಲು, ದೇವಾಃ–ಇಂದ್ರಾದಿ ದೇವತೆಗಳು, ಅಮಹೀಯಂತ–ಪೂಜಿಸಲ್ಪಟ್ಟರು. ತೇ–ಆ ದೇವತೆಗಳು, ಅಯಂ ವಿಜಯಃ-ಈ ಜಯವು, ಅಸ್ಮಾಕಮೇವ–ನಮ್ಮ ಶಕ್ತಿಯಿಂದಲೇ ಉಂಟಾದುದು, ಅಯಂ ಮಹಿಮಾ-ಈ ಜಯಿಸುವ ಸಾಮರ್ಥ್ಯವು ಅಸ್ಮಾಕಮೇವ–ನಮ್ಮದೇ, ಇತಿ–ಹೀಗೆಂದು, ಅಮನ್ಯಂತ–ಎಣಿಸಿದರು.

ತಾತ್ಪರ್ಯ—ಎಲ್ಲರಿಗೂ ಪರಮಾತ್ಮನ ಅನುಗ್ರಹದಿಂದಲೇ ಆಯಾ ಕೆಲಸಮಾಡತಕ್ಕ ಶಕ್ತಿಯು ಉಂಟಾಗುವುದು ಎಂದು, "ಆತ್ಮನಾ ವಿಂದತೇ ವೀರ್ಯಂ" ಎಂಬ ವಾಕ್ಯದ ಮೂಲಕವೂ, "ಶ್ರೋತ್ರಸ್ಯ ಶ್ರೋತ್ರಂ" ಎಂಬಿವೇ ಮೊದಲಾದ ವಾಕ್ಯಗಳ ಮೂಲಕವಾಗಿಯೂ ಹಿಂದೆ ಹೇಳಲ್ಪಟ್ಟಿರುವ ವಿಷಯುವನ್ನು ಒಂದು ಕಥೆಯ ಮೂಲಕ ಈ ಖಂಡದಲ್ಲಿ ತಿಳಿಯಪಡಿಸಲಾಗಿದೆ.

ಪರಬ್ರಹ್ಮನು ದೇವಾಸುರಯುದ್ಧದಲ್ಲಿ ದೇವತೆಗಳ ಅನುಗ್ರಹಕ್ಕಾಗಿ ಅವರಲ್ಲಿ ಅಂತರ್ಯಾಮಿಯಾಗಿದ್ದು ರಾಕ್ಷಸರನ್ನು ಜಯಿಸಿದನು. ಈ ಪರಮಾತ್ಮನಿಂದ ಉಂಟಾದ ಜಯವನ್ನು ದೇವತೆಗಳು ತಮ್ಮ ಸಾಮರ್ಥ್ಯದಿಂದಲೇ ಉಂಟಾಯಿತೆಂದು ಎಣಿಸಿಕೊಂಡರು.

ಮಂತ್ರ—ತದ್ಧೈಷಾಂ ವಿಜಜ್ಞೌ ತೇಭ್ಯೋ ಹ ಪ್ರಾದುರ್ಬಭೂವ ।
ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ ॥ ೨ ॥

ಅರ್ಥ—ತತ್–ಆ ಪರಬ್ರಹ್ಮನು, ಏಷಾಂ–ದುರಭಿಮಾನಿಗಳಾದ ದೇವತೆಗಳ, ತತ್–ಅಜ್ಞಾನವನ್ನು, ವಿಜಜ್ಞೌ–ತಿಳಿದುಕೊಂಡನು. ತೇಭ್ಯಃ ಆ ದೇವತೆಗಳ ಅನುಗ್ರಹಕ್ಕಾಗಿ, ಪ್ರಾದುರ್ಬಭೂವ–ಯಕ್ಷನ ರೂಪದಿಂದ ಕಾಣಿಸಿಕೊಂಡನು, ತತ್–ಆ ಯಕ್ಷರೂಪವನ್ನು, ನ ವ್ಯಜಾನಂತ–ಪರಬ್ರಹ್ಮನೆಂದು ದೇವತೆಗಳು ತಿಳಿದುಕೊಳ್ಳಲಿಲ್ಲ. ಯಕ್ಷಂ–ಪೂಜ್ಯವಾದ, ಇದಂ–ಈ ವಸ್ತುವು, ಕಿಂ–ಯಾವುದು ಎಂದು ಎಣಿಸಿದರು.

ತಾತ್ಪರ್ಯ—ದೇವತೆಗಳು ತಮ್ಮ ಅಶಕ್ತಿಯನ್ನು ತಿಳಿಯದೇ ತಮ್ಮ ಶಕ್ತಿಯಿಂದಲೇ ಜಯವುಂಟಾಯಿತೆಂದು ಅಹಂಕಾರಪಡುತ್ತಿರುವುದನ್ನು ಪರಮಾತ್ಮನು ತಿಳಿದುಕೊಂಡು ಇವರ ಅಹಂಕಾರವನ್ನು ಹೋಗಲಾಡಿಸಿ ಸರಿಯಾದ ಜ್ಞಾನವನ್ನುಂಟುಮಾಡಬೇಕೆಂದು ಅವರಿಗೆ ಯಕ್ಷರೂಪದಿಂದ ಕಾಣಿಸಿಕೊಂಡನು. ಅದನ್ನು ಅವರು ಪರಬ್ರಹ್ಮನೆಂದು ತಿಳಿದುಕೊಳ್ಳದೇ ಈ ಪೂಜ್ಯವಸ್ತು ಯಾವುದು ? ಯಾವುದು ? ಎಂದು ಎಣಿಸುತ್ತಿದ್ದರು.

ಮಂತ್ರ—ತೇಽಗ್ನಿಮಬ್ರುವನ್ ಜಾತವೇದ
ಏತದ್ವಿಜಾನೀಹಿ ಕಿಮೇತದ್ಯಕ್ಷಮಿತಿ ತಥೇತಿ ॥ ೩ ॥
ತದಭ್ಯದ್ರವತ್ತಮಭ್ಯವದತ್ ಕೋಽಸೀತ್ಯಗ್ನಿರ್ವಾ
ಅಹಮಸ್ಮೀತ್ಯಬ್ರವೀಜ್ಜಾತವೇದಾ ವಾ ಅಹಮಸ್ಮೀತಿ ॥೪॥

ಅರ್ಥ—ತೇ–ಆ ದೇವತೆಗಳು, ಅಗ್ನಿಂ–ಅಗ್ನಿಯನ್ನು ಕುರಿತು, ಜಾತವೇದಃ–ಅಗ್ನಿಯೇ, ಏತತ್–ಈ ವಿಷಯವನ್ನು, ವಿಜಾನೀಹಿ–ಚನ್ನಾಗಿ ತಿಳಿದುಕೊಂಡು ಬಾ, (ಎಂದು) ಅಬ್ರುವನ್–ಹೇಳಿದರು. (ಅವನು) ತಥಾ ಇತಿ–ಹಾಗೆಯೇ ಆಗಲಿ ಎಂದು, ತತ್–ಆ ಯಕ್ಷಸಮೀಪವನ್ನು ಕುರಿತು, ಅಭ್ಯದ್ರವತ್–ಹೋದನು. ತಂ–ಆ ಅಗ್ನಿಯನ್ನು ಕುರಿತು, ಕಃ ಅಸಿ–ನೀನು ಯಾರು, ಇತಿ–ಎಂದು, (ಆ ಯಕ್ಷನು) ಅಭ್ಯವದತ್–ಕೇಳಿದನು. ಅಹಂ–ನಾನು, ಅಗ್ನಿಃ ಅಸ್ಮಿ–ಎಲ್ಲವನ್ನೂ ಸುಡತಕ್ಕ ಸಾಮರ್ಥ್ಯವುಳ್ಳವನಾಗಿದೇನೆ ಎಂದು, ವಾ–ಅಥವಾ, ಜಾತವೇದಾಃ–ಹುಟ್ಟಿದ ವಸ್ತುಗಳನ್ನೆಲ್ಲಾ ತಿಳಿಯತಕ್ಕವನು, ಅಸ್ಮಿ–ಆಗಿದ್ದೇನೆ, ಇತಿ–ಹೀಗೆಂದು, ಅಬ್ರವೀತ್-ಹೇಳಿದನು.

ತಾತ್ಪರ್ಯ—ದೇವತೆಗಳು ಆ ಯಕ್ಷಸ್ವರೂಪವನ್ನು ಚನ್ನಾಗಿ ತಿಳಿದುಕೊಂಡು ಬರುವಂತೆ ಅಗ್ನಿಯನ್ನು ಕಳುಹಿಸಿದರು. ಅವನು ಆ ಯಕ್ಷನ ಬಳಿಗೆ ಹೋದನು; ಅವನನ್ನು ನೀನು ಯಾರೆಂದು ಆ ಯಕ್ಷನು ಪ್ರಶ್ನೆ ಮಾಡಿದನು. ನಾನು ಎಲ್ಲಾ ವಸ್ತುಗಳನ್ನು ಸುಡತಕ್ಕ ಶಕ್ತಿಯುಳ್ಳವನೂ, ಹುಟ್ಟಿದ ವಸ್ತುಗಳನ್ನೆಲ್ಲಾ ತಿಳಿಯತಕ್ಕವನೂ ಆಗಿದ್ದೇನೆ ಎಂದು ಅಗ್ನಿಯು ಉತ್ತರಕೊಟ್ಟನು.

ಮಂತ್ರ—ತಸ್ಮಿಂಸ್ತ್ವಯಿ ಕಿಂ ವೀರ್ಯಮಿತ್ಯಪೀದಂ
ಸರ್ವಂ ದಹೇಯಂ ಯದಿದಂ ಪೃಥಿವ್ಯಾಮಿತಿ ॥ ೫ ॥

ತಸ್ಮೈ ತೃಣಂ ನಿದಧಾವೇತದ್ದಹೇತಿ
ತದುಪಪ್ರೇಯಾಯ ಸರ್ವಜವೇನ ತನ್ನ
ಶಶಾಕ ದಗ್ಧುಂ ಸ ತತ ಏವ ನಿವವೃತೇ
ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥ ೬ ॥

ಅರ್ಥ—ತಸ್ಮಿನ್ ತ್ವಯಿ–ಹಿಂದೆ ಹೇಳಲ್ಪಟ್ಟ ನಿನ್ನಲ್ಲಿ, ಕಿಂ ವೀರ್ಯಂ–ಏನು ಶಕ್ತಿ ಇದೆ, ಇತಿ–ಎಂದು (ಆ ಯಕ್ಷನು ಕೇಳಿದನು). ಪೃಥಿವ್ಯಾಂ–ಭೂಮಿಯಲ್ಲಿ, ಯತ್ ಇದಂ–ಯಾವ ವಸ್ತು ಇದೆಯೋ. ಸರ್ವಂ ಅಪಿ–ಎಲ್ಲವನ್ನೂ ಕೂಡ, ದಹೇಯಂ–ಸುಡಬಲ್ಲೆನು (ಎಂದು ಅಗ್ನಿಯು ಉತ್ತರ ಕೊಟ್ಟನು). ತಸ್ಮೈ–ಆ ಅಗ್ನಿಗೆ, ಏತತ್–ಇದನ್ನು, ದಹ–ಸುಡು, ಇತಿ–ಎಂದು, ತೃಣಂ–ಹುಲ್ಲನ್ನು, ನಿದಧೌ–ಇಟ್ಟನು. ಸರ್ವಜವೇನ–ತನ್ನ ಎಲ್ಲಾ ಶಕ್ತಿಯೊಡನೆ, ತತ್-ಆ ಹುಲ್ಲಿನ ಉಪಪ್ರೇಯಾಯ–ಸಮೀಪಕ್ಕೆ, ಹೋದನು. ತತ್–ಆ ಹುಲ್ಲನ್ನು, ದಗ್ಧುಂ–ಸುಡುವುದಕ್ಕೆ. ನ ಶಶಾಕ–ಸಮರ್ಥನಾಗಲಿಲ್ಲ. ಸಃ–ಆ ಅಗ್ನಿಯು, ತತ ಏವ–ಹುಲ್ಲನ್ನು ಸುಡಲು ಸಾಮರ್ಥ್ಯವಿಲ್ಲದೇ ಇರುವ ಕಾರಣದಿಂದಲೇ, ನಿವವೃತೇ–ಹಿಂತಿರುಗಿದನು. ಯತ್ ಏತತ್ ಯಕ್ಷಂ–ಈ ಮುಂದೆ ಇರುವ ಯಕ್ಷಸ್ವರೂಪವನ್ನು, ವಿಜ್ಞಾತುಂ–ತಿಳಿಯುವುದಕ್ಕೆ, ನ ಅಶಕಂ–ಶಕ್ತನಾಗಲಿಲ್ಲ. ಇತಿ–ಎಂದು (ದೇವತೆಗಳಿಗೆ ಹೇಳಿದನು).

ತಾತ್ಪರ್ಯ—ಆ ಯಕ್ಷನು— "ನಿನ್ನಲ್ಲಿರುವ ಶಕ್ತಿ ಏನು" ಎಂದು ಕೇಳಲು, "ಈ ಲೋಕದಲ್ಲಿರುವ ವಸ್ತುವನ್ನೆಲ್ಲಾ ಸುಡಬಲ್ಲೆ" ಎಂದು ಅಗ್ನಿಯು ಉತ್ತರಕೊಟ್ಟನು. "ಹಾಗಾದರೆ ಈ ಹುಲ್ಲನ್ನು ಸುಡು" ಎಂದು ಅವನ ಮುಂದೆ ಹುಲ್ಲನ್ನು ಇಟ್ಟನು. ಅಗ್ನಿಯು, ಅದರ ಹತ್ತಿರಕ್ಕೆ ಹೋಗಿ ತನ್ನ ಎಲ್ಲಾ ಶಕ್ತಿಯಿಂದ ಅದನ್ನು ಸುಡಲು ಆಗದೆ ಹಿಂತಿರುಗಿ ಹೋಗಿ ಇದನ್ನು ತಿಳಿಯುವುದಕ್ಕೆ ನನ್ನ ಕೈಯ್ಯಲ್ಲಿ ಆಗಲಿಲ್ಲವೆಂದು ದೇವತೆಗಳಿಗೆ ಹೇಳಿದನು.

ಮಂತ್ರ—ಅಥ ವಾಯುಮಬ್ರುವನ್ ವಾಯುವೇತದ್ವಿಜಾನೀಹಿ
ಕಿಮೇತದ್ಯಕ್ಷಮಿತಿ ತಥೇತಿ ॥ ೭ ॥

ತದಭ್ಯದ್ರವತ್ತಮಭ್ಯವದತ್ಕೋಽಸೀತಿ ವಾಯುರ್ವಾ
ಅಹಮಸ್ಮೀತ್ಯಬ್ರವೀನ್ಮಾತರಿಶ್ವಾ ವಾ ಅಹಮಸ್ಮೀತಿ ॥೮॥

ತಸ್ಮಿಂಸ್ತ್ವಯಿ ಕಿಂ ವೀರ್ಯಮಿತ್ಯಪೀದಂ ।
ಸರ್ವಮಾದದೀಯಂ ಯದಿದಂ ಪೃಥಿವ್ಯಾಮಿತಿ ॥೯॥

**ತಸ್ಮೈ ತೃಣಂ ನಿದಧಾವೇತದಾದತ್ಸ್ವೇತಿ ತದುಪ
ಪ್ರೇಯಾಯ ಸರ್ವಜವೇನ ತನ್ನ ಶಶಾಕಾದಾತುಂ
ಸ ತತ ಏವ ನಿವವೃತೇ ನೈತದಶಕಂ ವಿಜ್ಞಾತುಂ
ಯದೇತದ್ಯಕ್ಷಮಿತಿ || ೧೦ ||**

ಅರ್ಥ —ಅಥ–ಬಳಿಕ, ವಾಯುಂ–ವಾಯುವನ್ನು ಕುರಿತು, ವಾಯೋ-ವಾಯುವೇ, ಏತತ್ ಯಕ್ಷಂ ಕಿಂ ಇತಿ–ಈ ಯಕ್ಷಸ್ವರೂಪವು ಯಾವುದೆಂದು, ಏತತ್–ಇದನ್ನು, ವಿಜಾನೀಹಿ–ತಿಳಿದುಕೊಂಡು ಬಾ ಎಂದು, ಅಬ್ರುವರ್–ಹೇಳಿದರು, (ಅವನು) ತಥಾ ಇತಿ–ಹಾಗೆಯೇ ಆಗಲಿ ಎಂದು, ತತ್–ಆ ಯಕ್ಷನ ಹತ್ತಿರಕ್ಕೆ, ಅಭ್ಯದ್ರವತ್–ಹೋದನು. ತಂ–ಅವನನ್ನು, ಕಃ ಅಸಿ–ಯಾವನಾಗಿದ್ದೀಯೆ ? ಇತಿ–ಎಂದು, ಅಭ್ಯವದತ್–ಕೇಳಿದನು. ಅಹಂ–ನಾನು, ವಾಯುಃ ಅಸ್ಮಿ–ಎಲ್ಲವನ್ನೂ ತೆಗೆದುಕೊಂಡು ಹೋಗತಕ್ಕವನಾಗಿದ್ದೇನೆ. ವಾ–ಅಥವಾ, ಮಾತರಿಶ್ವಾ–ಮಾತರಿಶ್ವನೆಂಬ ಹೆಸರುಳ್ಳವನು, ಅಹಂ–ನಾನು, ಅಸ್ಮಿ–ಆಗಿದ್ದೇನೆ. (ಎಂದು ಉತ್ತರಕೊಟ್ಟನು.)

ತಸ್ಮಿನ್ ತ್ವಯಿ ಕಿಂ ವೀರ್ಯಂ ಇತಿ–ಆ ನಿನ್ನಲ್ಲಿ ಏನು ಶಕ್ತಿ ಇದೆ ಎಂದು ಯಕ್ಷನು ಕೇಳಿದನು. ಪೃಥಿವ್ಯಾಂ ಯತ್ ಇದಂ ಸರ್ವಮಪಿ–ಭೂಮಿಯಲ್ಲಿರತಕ್ಕದ್ದೆಲ್ಲವನ್ನೂ ಕೂಡ, ಆದದೀಯಂ ಇತಿ–ತೆಗೆದುಕೊಳ್ಳುತ್ತೇನೆ ಎಂದು (ಪ್ರತ್ಯುತ್ತರ ಕೊಟ್ಟನು) ತಸ್ಮೈ ತೃಣಂ ನಿದಧೌ–ಅವನಿಗೆ ಹುಲ್ಲನ್ನು ಕೊಟ್ಟನು, ಏತತ್–ಇದನ್ನು, ಆದತ್ಸ್ವ ಇತಿ–ತೆಗೆದುಕೋ ಎಂದನು. ಸರ್ವಜವೇನ-ತನ್ನ ಎಲ್ಲಾ ಶಕ್ತಿಯೊಡನೆ, ತತ್-ಆ ಹುಲ್ಲಿನ ಉಪಪ್ರೇಯಾಯ-ಹತ್ತಿರಕ್ಕೆ ಹೋದನು. ತತ್–ಅದನ್ನು, ಆದಾತುಂ–ತೆಗೆದುಕೊಳ್ಳಲು, ನ ಶಶಾಕ–ಸಮರ್ಥನಾಗಲಿಲ್ಲ. ಸಃ–ಆ ವಾಯುವು, ತತ ಏವ–ಆ ಕಾರಣದಿಂದಲೇ, ನಿವವೃತೇ–ಹಿಂತಿರುಗಿದನು. ಏತತ್ ಯಕ್ಷಂ ಇತಿ–ಈ ಯಕ್ಷಸ್ವರೂಪವು ಇಂತಹುದು ಎಂದು, ಏತತ್–ಇದನ್ನು, ವಿಜ್ಞಾತುಂ–ತಿಳಿದುಕೊಳ್ಳುವುದಕ್ಕೆ, ನ ಅಶಕಂ-ಸಮರ್ಥನಾಗಲಿಲ್ಲ, ಇತಿ–ಎಂದು (ದೇವತೆಗಳಿಗೆ ಹೇಳಿದನು.)

ತಾತ್ಪರ್ಯ— ಬಳಿಕ, ವಾಯುವನ್ನು ಕುರಿತು ನೀನು ಈ ಯಕ್ಷನ ಸ್ವರೂಪವನ್ನು ತಿಳಿದು ಬಾ ಎಂದು ಹೇಳಿದರು. ಅವನು ಅಲ್ಲಿಗೆ ಹೋದನು. ನೀನು ಯಾರೆಂದೂ ನಿನ್ನಲ್ಲಿರುವ ಶಕ್ತಿಯೇನು ಎಂದೂ ಕೇಳಲು, ನಾನು ಲೋಕದಲ್ಲಿರುವ ಎಲ್ಲಾ ವಸ್ತುಗಳನ್ನೂ ತೆಗೆದುಕೊಳ್ಳತಕ್ಕ ವಾಯುವೆಂದನು. ಹಾಗಾದರೆ, ಈ ಹುಲ್ಲನ್ನು ತೆಗೆದುಕೋ ಎಂದು ಹುಲ್ಲನ್ನು ಇಟ್ಟನು. ಅದನ್ನು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿದರೂ ತೆಗೆದುಕೊಳ್ಳಲು ಆಗದೇ ಹಿಂತಿರುಗಿ ಬಂದು, ಇದರ ಸ್ವರೂಪವನ್ನು ತಿಳಿಯಲು ನನಗೆ ಸಾಮರ್ಥ್ಯವಿಲ್ಲ ವೆಂದು ದೇವತೆಗಳಿಗೆ ಹೇಳಿದನು.

ಮಂತ್ರ— ಅಥೇಂದ್ರಮಬ್ರುವನ್ ಮಘವನ್ನೇತದ್ವಿಜಾನೀಹಿ
ಕಿಮೇತದ್ಯಕ್ಷಮಿತಿ
ತಥೇತಿ ತದಭ್ಯದ್ರವತ್ ತಸ್ಮಾತ್ತಿರೋದಧೇ ||೧೧||

ಅರ್ಥ—ಅಥ–ಬಳಿಕ, ಇಂದ್ರಂ–ಇಂದ್ರನನ್ನು ಕುರಿತು, ಮಘರ್ವ– ಪೂಜ್ಯನಾದ ಇಂದ್ರನೇ, ಏತತ್ ಯಕ್ಷಂ ಕಿಂ ಇತಿ–ಈ ಯಕ್ಷಸ್ವರೂಪವಾವು ದೆಂಬುದನ್ನು, ವಿಜಾನೀಹಿ–ಚನ್ನಾಗಿ ತಿಳಿದು ಬಾ ಎಂದು ಅಬ್ರುರ್ವ– ಹೇಳಿ ದರು. ತಥೇತಿ–ಹಾಗೆಯೇ ಆಗಲಿ ಎಂದು, ತತ್–ಆ ಯಕ್ಷನ ಬಳಿಗೆ, ಅಭ್ಯದ್ರವತ್–ಹೋದನು. ತಸ್ಮಾತ್ ತಿರೋದಧೆ–ಅವನಿಗೆ ಕಾಣದೆ ಮರೆ ಯಾಯಿತು.

ತಾತ್ಪರ್ಯ—ಬಳಿಕ ಈ ಯಕ್ಷಸ್ವರೂಪವನ್ನು ತಿಳಿಯಲು ಇಂದ್ರನನ್ನು ಕಳುಹಿಸಿದರು. ಅವನು ಅದರ ಬಳಿಗೆ ಹೋದನು. ಆ ಯಕ್ಷನು, ಇವನಿಗೆ ಕಾಣಿಸಿಕೊಳ್ಳದೆ ಮರೆಯಾಯಿತು.

ಮಂತ್ರ— ಸ ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ ।
ಬಹುಶೋಭಮಾನಾಮುಮಾಂ ಹೈಮವತೀಮ್
ತಾಂ ಹೋವಾಚ ಕಿಮೇತದ್ಯಕ್ಷಮಿತಿ || ೧೨ ||

ಅರ್ಥ—ಸಃ-ಆ ಇಂದ್ರನು, ತಸ್ಮಿನ್ ಆಕಾಶೇ ಏವ-ಆ ಯಕ್ಷನಿದ್ದ ಸ್ಥಳದಲ್ಲಿಯೇ (ಕಾಣಿಸಿ ಕೊಂಡಂಥ) ಹೈಮವತೀಂ—ಸುವರ್ಣಾಭರಣಗಳಿಂದ ಬಹುಶೋಭಮಾನಾಂ—ಚನ್ನಾಗಿ ಹೊಳೆಯುತ್ತಿರುವ, ಮಾಂ ಸ್ತ್ರೀಯಂ ಉ—ಲಕ್ಷ್ಮೀರೂಪಳಾದ ಹೆಂಗಸನ್ನೇ (ದೃಷ್ಟ್ವಾ—ನೋಡಿ) ಅಜಗಾಮ—ಅವಳ ಹತ್ತಿರಕ್ಕೆ ಹೋದನು. ತಾಂ—ಅವಳನ್ನು ಕುರಿತು, ಏತತ್ ಯಕ್ಷಂ ಕಿಂ ಇತಿ—ಈ ಯಕ್ಷನು ಯಾರು ಎಂದು, ಉವಾಚ ಹ—ಪ್ರಶ್ನೆಮಾಡಿದನು.

ತಾತ್ಪರ್ಯ—ಆ ಇಂದ್ರನು ಯಕ್ಷನಿದ್ದ ಸ್ಥಳಕ್ಕೆ ಬಂದಂಥ ಬಹಳ ಕಾಂತಿಯುಳ್ಳ ಮಹಾಲಕ್ಷ್ಮಿಯನ್ನು ಕಂಡು ಅವಳಿದ್ದ ಸ್ಥಳಕ್ಕೆ ಬಂದು ಈ ಯಕ್ಷಸ್ವರೂಪವಾವುದು ಎಂದು ಆಕೆಯನ್ನು ಕೇಳಿದನು.

ಇಲ್ಲಿಗೆ ಮೂರನೆಯ ಖಂಡ ಮುಗಿಯಿತು

ಚತುರ್ಥಃ ಖಂಡಃ

ಮಂತ್ರ—ಸಾ ಬ್ರಹ್ಮೇತಿ ಹೋವಾಚ ಬ್ರಹ್ಮಣೋ ವಾ ಏತದ್ವಿಜಯೇ ಮಹೀಯಧ್ವಮಿತಿ। ತತೋ ಹ ವೈ ವಿದಾಂಚಕಾರ ಬ್ರಹ್ಮೇತಿ॥

ಅರ್ಥ—ಸಾ—ಆ ಮಹಾಲಕ್ಷ್ಮಿಯು, ಬ್ರಹ್ಮ ಇತಿ—ಪರಬ್ರಹ್ಮನೆಂದೂ, ಬ್ರಹ್ಮಣಃ ವಾ—ಪರಬ್ರಹ್ಮನಿಂದ ಉಂಟಾದ, ಏತದ್ವಿಜಯೇ—ಈ ರಾಕ್ಷಸರ ಜಯದಲ್ಲಿ, ಮಹೀಯಧ್ವಂ-ಪೂಜೆಪಡೆಯಿರಿ ಎಂದೂ, ಉವಾಚ ಹ-ಹೇಳಿ ದಳು, ತತಃ—ಅವಳಿಂದ, ಬ್ರಹ್ಮ ಇತಿ—ಪರಬ್ರಹ್ಮನೆಂದು, ವಿದಾಂಚಕಾರ ಹ ವೈ—ತಿಳಿದುಕೊಂಡನು.

ತಾತ್ಪರ್ಯ—ಈ ಯಕ್ಷರೂಪದಿಂದ ಬಂದಿರುವವನು ಪರಬ್ರಹ್ಮನೇ. ಸರ್ವಶಕ್ತನಾದ ಅವನಿಂದಲೇ ರಾಕ್ಷಸರ ಜಯವುಂಟಾಯಿತು. ನಿಮ್ಮ ಶಕ್ತಿಯಿಂದಲ್ಲ—ಎಂದು ಆ ಮಹಾಲಕ್ಷ್ಮಿಯಿಂದ ಇಂದ್ರನು ಪರಬ್ರಹ್ಮಸ್ವರೂಪ ವನ್ನು ತಿಳಿದುಕೊಂಡನು.

ಮಂತ್ರ—ತಸ್ಮಾದ್ವಾ ಏತೇ ದೇವಾ ಅತಿತರಾಮಿವಾನ್ಯಾನ್ ದೇವಾ೯ ಯದಗ್ನಿರ್ವಾಯುರಿಂದ್ರಸ್ತೇ ಹ್ಯೇನನ್ನೇದಿಷ್ಠಂ ಪಸ್ಪರ್ಶುಃ ತೇಹ್ಯೇನತ್ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥೨॥

ಅರ್ಥ—ಯತ್ ಅಗ್ನಿಃ, ವಾಯುಃ, ಇಂದ್ರಃ-ಯಾವ ಅಗ್ನಿ, ವಾಯು ಇಂದ್ರರುಂಟೋ, ತೇ–ಅವರು, (ಯಸ್ಮಾತ್–ಯಾವ ಕಾರಣದಿಂದ), ಏನತ್–ಈ ಪರಬ್ರಹ್ಮನನ್ನು, ನೇದಿಷ್ಠಂ ಪಸ್ಪರ್ಶುಃ–ಸಮೀಪದಲ್ಲಿ ಸಂಧಿಸಿ ಮಾತನಾಡಿದರೋ, ತೇ ಹಿ–ಅವರು, ಏನತ್–ಈ ಯಕ್ಷನನ್ನು, ಬ್ರಹ್ಮೇತಿ–ಪರಬ್ರಹ್ಮನನ್ನಾಗಿ, ಪ್ರಥಮಃ–ಮೊದಲು, ವಿದಾಂಚಕಾರ–ತಿಳಿದುಕೊಂಡರೋ ತಸ್ಮಾತ್–ಆ ಕಾರಣದಿಂದಲೇ, ಏತೇ ದೇವಾಃ–ಈ ಅಗ್ನಿ, ವಾಯು, ಇಂದ್ರರೆಂಬ ದೇವತೆಗಳು, ಅನ್ಯಾ೯ ದೇವಾ೯–ಇತರ ದೇವತೆಗಳನ್ನು, ಅತಿತರಾಂ ಇವ–ಮೀರಿರುತ್ತಾರೆ.

ತಾತ್ಪರ್ಯ—ಅಗ್ನಿ, ವಾಯು, ಇಂದ್ರರು, ಯಕ್ಷನ ಸಮೀಪಕ್ಕೆ ಹೋಗಿ ಅವನೊಡನೆ ಮಾತನಾಡಿ ಅವನನ್ನು ಪರಬ್ರಹ್ಮನೆಂಬುದಾಗಿ ಮೊದಲು ತಿಳಿದುಕೊಂಡದ್ದರಿಂದ, ಅವರು ಇತರ ದೇವತೆಗಳಿಗಿಂತ ಮೇಲಾದವರು.

ಮಂತ್ರ—ತಸ್ಮಾದ್ವಾ ಇಂದ್ರೋ ಅತಿತರಾಮಿವಾನ್ಯಾ೯ ದೇವಾ೯ ಸ ಹ್ಯೇನನ್ನೇದಿಷ್ಠಂ ಪಸ್ಪರ್ಶ ಸ ಹ್ಯೇನತ್ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥ ೩ ॥

ಅರ್ಥ—ತಸ್ಮಾತ್ ವಾ–ಆ ಕಾರಣದಿಂದಲೇ, ಇಂದ್ರಃ-ಇಂದ್ರನು, ಅನ್ಯಾ೯–ಬೇರೆ, ದೇವಾ೯–ದೇವತೆಗಳನ್ನು, ಅತಿತರಾಂ ಇವ–ಮೀರಿರುತ್ತಾನೆ. ಸಃ ಹಿ–ಅವನಾದರೋ, ನೇದಿಷ್ಠಂ–ಹತ್ತಿರದಲ್ಲಿದ್ದ, ಏನತ್–ಈ ಪರಬ್ರಹ್ಮನನ್ನು ಪಸ್ಪರ್ಶ–ನೋಡಿದನು, ಸಹಿ–ಅವನಾದರೋ, ಪ್ರಥಮಃ–ಮೊದಲು ಬ್ರಹ್ಮ ಇತಿ ವಿದಾಂಚಕಾರ–ಪರಬ್ರಹ್ಮನೆಂದು ತಿಳಿದುಕೊಂಡನು.

ತಾತ್ಪರ್ಯ—ಈ ಅಗ್ನಿ, ವಾಯು, ಇಂದ್ರರೊಳಗೆ, ಇಂದ್ರನು ಪರಬ್ರಹ್ಮನನ್ನು ಮೊದಲುನೋಡಿ, ಪರಬ್ರಹ್ಮನೆಂದು ಮೊದಲು ತಿಳಿದುಕೊಂಡದ್ದರಿಂದ ಅಗ್ನಿ ವಾಯುಗಳಿಗಿಂತ ಮೇಲಾದವನು.

ಮಂತ್ರ—ತಸ್ಯೈಷ ಆದೇಶಃ ಯದೇತದ್ವಿದ್ಯುತೋ ವ್ಯದ್ಯುತದಾ ಇತೀನ್ನ್ಯಮೀಮಿಷದಾ ಇತ್ಯಧಿದೈವತಂ || ೪ ||

ಅರ್ಥ—ತಸ್ಯ–ಆ ಪರಬ್ರಹ್ಮನು ತೋರಿ ಮರೆಯಾಗುವುದಕ್ಕೆ, ಏಷಃ ಆದೇಶಃ–ಉಪಮಾನರೂಪವಾದ ಉಪದೇಶವು. ಯತ್–ಲೋಕದಲ್ಲಿ ಪ್ರಸಿದ್ಧವಾದ, ಏತತ್ ವಿದ್ಯುತಃ ವ್ಯದ್ಯುತತ್–ಇದು ಮಿಂಚಿನ ಪ್ರಕಾಶವು, ಆ ಇ–ಉಪಮಾನವು, ನ್ಯಮೀಮಿಷತ್–ಕಣ್ಣು ರಪ್ಪೆ ಮುಚ್ಚಿಕೊಳ್ಳುವುದು, ಇತ್–(ಬ್ರಹ್ಮನು ಮರೆಯಾಗುವುದಕ್ಕೆ) ಉಪಮಾನವು, ಇತಿ ಅಧಿದೈವತಂ–ಹೀಗೆ ಆತ್ಮವಲ್ಲದ ಆಕಾಶದಲ್ಲಿರುವ ಮಿಂಚಿನ ಉಪಮಾನವು ಹೇಳಲ್ಪಟ್ಟಿತು.

ತಾತ್ಪರ್ಯ—ಬ್ರಹ್ಮನು ಕಾಣಿಸಿಕೊಂಡು ಮರೆಯಾಗುವ ವಿಷಯದಲ್ಲಿ ಮಿಂಚು ಹೊಳೆದು ಮರೆಯಾಗುವುದನ್ನೂ, ಕಣ್ಣಿನ ರಪ್ಪೆ ಮುಚ್ಚಿಕೊಳ್ಳುವುದನ್ನೂ ಉಪಮಾನವಾಗಿ ಹೇಳಬಹುದು. ಇವು, ಕ್ಷಣಮಾತ್ರ ಹೇಗೆ ಕಾಣಿಸಿಕೊಂಡು ಮರೆಯಾಗುತ್ತವೆಯೋ ಹಾಗೆಯೇ ಪರಬ್ರಹ್ಮಸಾಕ್ಷಾತ್ಕಾರವೂ ಕ್ಷಣಮಾತ್ರ ತೋರಿ ಮರೆಯಾಗುವುದು.

ಅಥವಾ

ಅರ್ಥ—ವಿದ್ಯುತಃ ವ್ಯದ್ಯುತತ್ ಇತಿ ಯತ್–ಮಿಂಚು ಹೊಳೆಯುವುದೆಂಬುದು ಯಾವುದುಂಟೋ, ಏಷಃ–ಇದು, ತಸ್ಯ–ಆ ಪರಬ್ರಹ್ಮನ, ಆದೇಶಃ–ಅಪ್ಪಣೆಯಿಂದುಂಟಾದುದು. ನ್ಯಮೀಮಿಷತ್ ಇತಿ–ಕಣ್ಣು ಮುಚ್ಚುವಿಕೆಯೂ ಕೂಡ, ತಸ್ಯ ಆದೇಶಃ–ಆ ಬ್ರಹ್ಮನ ಸಂಕಲ್ಪದಿಂದಲೇ ನಡೆಯುತ್ತದೆ.

ತಾತ್ಪರ್ಯ—ಮೇಘ, ಮಿಂಚು ಮೊದಲಾದ ಕಾಣಿಸಿಕೊಳ್ಳತಕ್ಕ ವಿಚಿತ್ರ ವ್ಯಾಪಾರಗಳೆಲ್ಲಾ ಪರಬ್ರಹ್ಮನ ಆಜ್ಞೆಯಿಂದ ನಡೆಯುವುವು. ನಾವು ಕಣ್ಣು ಮುಚ್ಚಿ ತೆಗೆಯುವುದು ಸಹ ಅವನ ಸಂಕಲ್ಪದಿಂದಲೇ ನಡೆಯುತ್ತದೆ.

ಮಂತ್ರ—ಅಥಾಧ್ಯಾತ್ಮಂ ಯದೇತದ್ಗಚ್ಛತೀವ ಚ ಮನೋಽನೇನ ಚೈತದುಪಸ್ಮರತ್ಯಭೀಕ್ಷ್ಣಂ ಸಂಕಲ್ಪಃ || ೫ ||

ಅರ್ಥ—ಅಥ–ಅನಂತರ, ಅಧ್ಯಾತ್ಮಂ–ಶರೀರದೊಳಗಿರುವ (ಉಪಮಾನವು) ಹೇಳಲ್ಪಡುತ್ತದೆ. ಮನಃ–ಮನಸ್ಸು, ಏತತ್–ಈ ಪರಬ್ರಹ್ಮನನ್ನು, ಗಚ್ಛತಿ–ವಿಷಯೀಕರಿಸುತ್ತದೆ ಎಂಬುದು ಯಾವುದುಂಟೋ, ತತ್ ಇವ–ಆದರಂತೆ, ಸಂಕಲ್ಪಃ–ಮನಸ್ಸಿನ ವ್ಯಾಪಾರವು, ಅಭೀಕ್ಷ್ಣಂ–ವಿಚ್ಛೇದವಿಲ್ಲದೆ, ಏತತ್–ಪರಬ್ರಹ್ಮನನ್ನು, ನ ಸ್ಮರತಿ ಹಿ–ಸ್ಮರಿಸುವುದಿಲ್ಲವಷ್ಟೆ.

ತಾತ್ಪರ್ಯ—ಮನಸ್ಸಿನ ವೃತ್ತಿಯು, ವಿಚ್ಛೇದವಿಲ್ಲದೇ ಪರಬ್ರಹ್ಮನನ್ನು ಸ್ಮರಿಸುವುದಿಲ್ಲ. ಬಲಾತ್ಕಾರದಿಂದ ಪರಬ್ರಹ್ಮನಲ್ಲಿ ಸೇರಿದರೂ ಅವನನ್ನು ಕ್ಷಣಕಾಲದಲ್ಲಿಯೇ ಬಿಟ್ಟುಬಿಡುವುದು. ಆದರಂತೆ ಪರಬ್ರಹ್ಮನು ಕ್ಷಣಕಾಲ ಮಾತ್ರ ತೋರಿ ಕೂಡಲೇ ಮರೆಯಾಗುತ್ತಾನೆ. ಇದು ಶರೀರದೊಳಗಿರುವ ವಸ್ತುವಿನ ಉಪಮಾನೋಪದೇಶವು.

ಅಥವಾ

ಮನಸ್ಸು ನಿರಂತರ ಪರಬ್ರಹ್ಮನನ್ನು ಸ್ಮರಿಸದೇ ಬಿಟ್ಟುಹೋಗುವುದೂ ಪರಮಾತ್ಮನ ಆಜ್ಞೆಯಿಂದಲೇ ಎಂದು ಶರೀರದೊಳಗಿನ ಉಪಮಾನವು ಹೇಳಲ್ಪಡುತ್ತದೆ. ನಿಜಸ್ಥಿತಿ ಹೀಗಿರುವಾಗ " ನೀವು, ' ರಾಕ್ಷಸರ ಜಯವು ನಮ್ಮಿಂದಲೇ ಆಯಿತು ಎಂದು ' ಭ್ರಮೆಪಡುವುದು ಸರಿಯಲ್ಲ " ಎಂದು ಪರಬ್ರಹ್ಮನು ದೇವತೆಗಳಿಗೆ ಉಪದೇಶ ಮಾಡಿದುದನ್ನು ಗುರುವು ಶಿಷ್ಯರಿಗೆ ತಿಳಿಯಪಡಿಸಿದನು.

ಮಂತ್ರ—ತದ್ಧ ತದ್ವನಂ ನಾಮ ತದ್ವನಮಿತ್ಯುಪಾಸಿತವ್ಯಂ |
ಸ ಯ ಏತದೇವಂ ವೇದಾಭಿ ಹೈನಂ
ಸರ್ವಾಣಿ ಭೂತಾನಿ ಸಂವಾಂಛಂತಿ || ೬ ||

ಅರ್ಥ—ತತ್–ಆ ಪರಬ್ರಹ್ಮವು, ವನಂ–ಸರ್ವರಿಂದ ಪ್ರಾರ್ಥಿಸಲ್ಪಡತಕ್ಕ ವಸ್ತುವು, ತತ್–ಆದಕಾರಣದಿಂದ, ವನಂ–ಸೇವಿಸಲ್ಪಡತಕ್ಕ ವಸ್ತು, ಇತಿ–ಎಂಬುದಾಗಿ, ಉಪಾಸಿತವ್ಯಂ–ಧ್ಯಾನಿಸಲ್ಪಡತಕ್ಕದ್ದು, ಸಃ–ಪ್ರಸಿದ್ಧನಾದ, ಯಃ–ಯಾವ, ಅಧಿಕಾರಿಯು, ಏವಂ–ಹೀಗೆ, ಏತತ್–ಈ ಪರಬ್ರಹ್ಮ

ನನ್ನು, ವೇದ–ತಿಳಿಯುತ್ತಾನೆಯೋ, ಏನಂ–ಇವನನ್ನು, ಸರ್ವಾಣಿ ಭೂತಾನಿ–ಎಲ್ಲಾ ಪ್ರಾಣಿಗಳೂ, ಸಂವಾಂಛಂತಿ–ಇಚ್ಛಿಸುತ್ತವೆ.

ತಾತ್ಪರ್ಯ—ಪರಬ್ರಹ್ಮನು ಎಲ್ಲರಿಂದಲೂ ಸೇವಿಸಲ್ಪಡುತ್ತಾನೆ. ಆದುದರಿಂದ ಅವನಿಗೆ "ವನ" ಎಂದು ಹೆಸರು. ಅವನನ್ನು "ವನ" ಎಂದು ಧ್ಯಾನಮಾಡತಕ್ಕ ಅಧಿಕಾರಿಯನ್ನು ಎಲ್ಲರೂ ಸೇವೆಮಾಡುತ್ತಾರೆ.

ಮಂತ್ರ—ಉಪನಿಷದಂ ಭೋ ಬ್ರೂಹೀತ್ಯುಕ್ತಾ ತ ಉಪನಿಷ-
ದ್ಬ್ರಾಹ್ಮೀಂ ವಾವ ತ ಉಪನಿಷದಮಬ್ರೂಮೇತಿ || ೭ ||

ಅರ್ಥ—ಭೋ-ಎಲೈ ಆಚಾರ್ಯನೇ, ಉಪನಿಷದಂ ಬ್ರೂಹಿ ರಹಸ್ಯವನ್ನು ಹೇಳು. ಇತಿ–ಎಂದು (ಶಿಷ್ಯನು ಕೇಳಲು), ತೇ–ನಿನಗೆ, ಬ್ರಾಹ್ಮೀ ಉಪನಿಷತ್–ಬ್ರಹ್ಮವಿಷಯವಾದ ರಹಸ್ಯವು, ಉಕ್ತಾ ವಾವ–ಹೇಳಲ್ಪಟ್ಟಿತು. ಉಪನಿಷದಂ–ಭಗವಂತನ ಅನುಗ್ರಹಕ್ಕೆ ಕಾರಣವಾದ, ಅದರ ಅಂಗಗಳನ್ನು, ಅಬ್ರೂಮ–ಹೇಳುವೆವು, ಇತಿ–ಹೀಗೆಂದು ಗುರುಗಳು ಹೇಳಿದರು.

ತಾತ್ಪರ್ಯ—ಭಗವಂತನ ಅನುಗ್ರಹ ಬರುವುದಕ್ಕೆ ಕಾರಣವಾದ ರಹಸ್ಯವನ್ನು ನಮಗೆ ಹೇಳಬೇಕೆಂದು ಶಿಷ್ಯನು ಕೇಳಲು–ನಿನಗೆ ಸ್ವಲ್ಪವೂ ಉಳಿಯದೆ ಮುಖ್ಯವಾದ ಬ್ರಹ್ಮವಿದ್ಯೆಯನ್ನು ಹೇಳಿದ್ದೇವೆ. ಈಗ ಅದಕ್ಕೆ ಬೇಕಾದ ಅಂಗಗಳನ್ನು ಹೇಳುವೆವು ಎಂದು ಗುರುಗಳು ಹೇಳಿದರು.

ಮಂತ್ರ—ತಸ್ಯೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ
ವೇದಾಸ್ಸರ್ವಾಂಗಾನಿ ಸತ್ಯಮಾಯತನಂ || ೮ ||
ಯೋ ವಾ ಏತಾಮೇವಂ ವೇದಾಪಹತ್ಯ
ಪಾಪ್ಮಾನಮನಂತೇ ಸ್ವರ್ಗೇ
ಲೋಕೇ ಜ್ಯೇಯೇ ಪ್ರತಿತಿಷ್ಠತಿ ಪ್ರತಿತಿಷ್ಠತಿ || ೯ ||

ಅರ್ಥ—ತಸ್ಯೈ–ಆ ಬ್ರಹ್ಮವಿದ್ಯೆಗೆ, ತಪಃ–ಶರೀರವನ್ನು ಒಣಗಿಸುವುದೆಂಬ ತಪಸ್ಸೂ, ದಮಃ–ಇಂದ್ರಿಯಗಳ ವ್ಯಾಪಾರವನ್ನು ತಡೆಯುವುದೂ,

ಕರ್ಮ–ಯಜ್ಞ ಮೊದಲಾದ ಕರ್ಮಗಳೂ ಇತಿ–ಹೀಗೆಂಬುವು. ಪ್ರತಿಷ್ಠಾ–ದೃಢಪಡಿಸತಕ್ಕ ಅಂಗಗಳು, ಸರ್ವಾಂಗಾನಿ ಶಿಕ್ಷೆ ಮೊದಲಾದ ಆರು ಅಂಗಗಳುಳ್ಳ, ವೇದಾಃ–ನಾಲ್ಕು ವೇದಗಳೂ, ಸತ್ಯಂ–ನಿಜ ಹೇಳುವುದೂ, ಆಯತನಂ–ವಿದ್ಯೆಯುಂಟು ಮಾಡತಕ್ಕ ಕಾರಣಗಳು.

ಯಃ ವಾ–ಯಾವ ಅಧಿಕಾರಿಯು, ಏತಾಂ–ಅಂಗಸಹಿತವಾದ ಬ್ರಹ್ಮವಿದ್ಯೆಯನ್ನು. ಏವಂ–ಈ ರೀತಿಯಾಗಿ, ವೇದ–ತಿಳಿಯುತ್ತಾನೆಯೋ, ಸಃ–ಅವನು, ಪಾಪ್ಮಾನಂ–ಮೋಕ್ಷಕ್ಕೆ ಅಡ್ಡಿಮಾಡತಕ್ಕ ಪುಣ್ಯಪಾಪಗಳನ್ನು, ಅಪಹತ್ಯ–ಹೋಗಲಾಡಿಸಿಕ್ಕೊಂಡು, ಅನಂತೇ–ಅಳತೆಯಿಲ್ಲದೇ ಇರುವ, ಜ್ಯೇಯೇ–ಎಲ್ಲಕ್ಕಿಂತ ದೊಡ್ಡದಾದ, ಸ್ವರ್ಗೇ ಲೋಕೇ–ವೈಕುಂಠ ಲೋಕದಲ್ಲಿ ಪ್ರತಿತಿಷ್ಠತಿ–ಶಾಶ್ವತವಾಗಿರುತ್ತಾನೆ.

ತಾತ್ಪರ್ಯ–ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ಭೋಗಗಳನ್ನು ಕಡಿಮೆ ಮಾಡಿಕ್ಕೊಂಡು, ಶರೀರವನ್ನು ಕೃಶಪಡಿಸತಕ್ಕದ್ದೆಂಬ ತಪಸ್ಸು, ಇಂದ್ರಿಯಗಳನ್ನು ಸ್ವೇಚ್ಛೆಯಾಗಿ ಬಿಡದೆ ಸ್ವಾಧೀನದಲ್ಲಿಡುವಿಕೆಯೆಂಬ ದಮ, ಯಜ್ಞಾದಿ ಕರ್ಮಾಚರಣೆ ಇವುಗಳನ್ನು ನಡೆಸುತ್ತಾ ಬಂದರೆ ಬ್ರಹ್ಮವಿದ್ಯೆಯು ದೃಢವಾಗುವುದು. ಆರು ಅಂಗಗಳೊಡನೆ ವೇದವನ್ನು ಕಲಿತು ನಿಜ ಹೇಳುತ್ತಾ ಬಂದರೆ ಬ್ರಹ್ಮಜ್ಞಾನವುಂಟಾಗುವುದು. ಈ ರೀತಿ ಅಂಗದೊಡನೆ ಕೂಡಿದ ಬ್ರಹ್ಮವಿದ್ಯೆಯನ್ನು ಆಚರಿಸಿದವನು ಮೋಕ್ಷಕ್ಕೆ ಅಡ್ಡಿಮಾಡತಕ್ಕ ಪುಣ್ಯಪಾಪಗಳನ್ನು ಕಳೆದುಕೊಂಡು, ವೈಕುಂಠಲೋಕಕ್ಕೆ ಹೋಗಿ, ಅಲ್ಲಿ ಪುನರ್ಜನ್ಮವಿಲ್ಲದೆ ಶಾಶ್ವತವಾಗಿರುತ್ತಾನೆ.

ಇಲ್ಲಿಗೆ ನಾಲ್ಕನೆಯ ಖಂಡವು ಮುಗಿಯಿತು

ಕೇನೋಪನಿಷತ್ ಮುಗಿಯಿತು.

ಆರ್. ಕೃಷ್ಣಶೆಟ್ಟಿ, ಪ್ರಿಂಟರ್,
ಶ್ರೀ ಶಾರದಾ ಪ್ರೆಸ್,
ಮೈಸೂರು.